
ಕೊರವಂಜಿ



Koravanji

ನವೆಂಬರ್
೧೯೫೭

★

ಸಂಪಾದಕರು :

ಶ್ರೀ|| ರಾ. ಶಿ.


ಬರಹಗಾರರು :

ಶ್ರೀ|| ರಾಮಿ
ಶ್ರೀ|| ಪಾಟೂಳಿ
ಶ್ರೀಮತಿ ಸುನಂದಮ್ಮ
ಶ್ರೀ|| ಅ. ರಾ. ಸೇ.
ಶ್ರೀ|| ಶನಿ
ಶ್ರೀ|| ಕಾಮತ್
ಶ್ರೀ|| ನಾ. ಕ.
ಶ್ರೀ|| ಪಾರ್ಥಸಾರಥಿ
ಶ್ರೀ|| ಪ್ರಸಾದ್
ಶ್ರೀ||| ದಾಶರಥಿ ದೀಕ್ಷಿತ್


ಇತ್ಯಾದಿ, ಇತ್ಯಾದಿ.

ಬಿಡಿ ಪ್ರತಿ


ತಿಳಿನಗೆಯ ಮಾಸಪತ್ರಿಕೆ











ಕೊರವಂಜಿ

ಸಂಪುಟ ೧೭ ನವೆಂಬರ್ ೧೯೫೭ ಸಂಚಿಕೆ ೮

ಕುಹಕಿಡಿಗಳು

ಖಾಂದಾರಿಗಳೆಲ್ಲಾ ಹೆಬ್ಬಿ ಗುಬ್ಬಾಲೆಯ ಹತ್ತಿರ ತಮ್ಮ ಕ್ಯಾಂಪು ಹೂಡಿದಾಗ, ಆ ಹಳ್ಳಿಯವರೆಲ್ಲಾ "ವಿನೋಬಾಜೀಕೀ ಜೈ" ಎಂದು ಕೂಗಿದುದು ಸುಳ್ಳಂತೆ!

* * *

ನವ್ಯ ದಂಪತಿಗಳ ಮೊದಲ ಮಗು ಒಲು ಅತ್ತಾಗ, ತಾಯಿಯಂದಳಂತೆ—"ಅಂದ್ರೆ! ನೀವು ಮದುವೇಲಿ ಹಾಕಿಕೊಂಡಿದ್ದ ರುಮಾಲು ಹಾಕಿಕೊಳ್ಳೀ, ಅದನ್ನು ನೋಡಿ ಮಗು ಅಳು ನಿಲ್ಲಿಸಿ ನಗಬಹುದು ಅಂತ.

* * *

ರೈಲು ಕಂಬಿಗಳ ಮಧ್ಯೆ ಮಲಗಿದ ಹೆಂಗಸು— ಪ್ರಾಣಕ್ಕೆ ತೊಂದರೆ ಆಗಲಿಲ್ಲ.
(ಪತ್ರಿಕೆ)

—ಅಯ್ಯೋ! ಅಷ್ಟೂ ತಿಳಿಯಲಿಲ್ಲವೇ ಆಕೆಗೆ. ಆಸ್ಪತ್ರೆಗೆ ಹೋಗಿ ಔಷಧಿ ಕುಡಿದು ಸುಖವಾಗಿ ಸಾಯಬಾರದಾಗಿತ್ತೇ!

* *

ಸಾರ್ವಜನಿಕ ಕಟ್ಟಡಗಳಿಗೆ ಸರ್ಕಾರಿ ಅಧಿಕಾರಿಗಳು ತಳಪಾಯ ಹಾಕ ಕೂಡದು ಎಂದು ಆಜ್ಞೆ ಹೊರಬಿದ್ದಿದೆಯಂತೆ.

ನ್ಯಾಯ! ಸರ್ಕಾರಿ ಅಧಿಕಾರಿಗಳು ತಳಪಾಯ ಹಾಕಿದರೆ, ಕಟ್ಟಡ ಮುಗಿಯುವುದಕ್ಕೆ ನಾಲ್ಕು ಶತಮಾನವಾದರೂ ಬೇಕಾಗುತ್ತೆ.

ರಷ್ಯಾದ ಮರಿಚಂದ್ರನ ಬೀಪ್ ಬೀಪ್ ಕೇಳುವುದಕ್ಕೋಸ್ಕರ, ನಮ್ಮ ಅಡಿಗೆ ಮನೆಯಲ್ಲಿರುವ ಜಿರಳೆಗಳೆಲ್ಲಾ ಅಂಗಳಕ್ಕೆ ಬಂದಿದೆಯೆಂದು ಶಾಲಾವಾಸ್ತ್ರರೊಬ್ಬರು ಪತ್ರ ಬರೆದಿದ್ದಾರೆ!

* * *

ಈಗ ಲಕ್ಕೋಟೆಗಳಿಗೆ ೧೩ ರಿಂದ ೧೫ ನಯಾಪೈಸೆ ಆಗಿದೆಯಂತೆ.

-- ಎರಡು ನಯಾಪೈಸೆ ಹೆಚ್ಚು ತೆಗೆದುಕೊಂಡ ಕಾರಣ, ಎರಡು ದಿನ ಹೆಚ್ಚಾಗಿ ಅಂಚೆಯವರೇ ಅವುಗಳನ್ನಿಟ್ಟುಕೊಂಡು, ನಂತರ ತಲಪಿಸುತ್ತಾರಂತೆ.

* * *

ಮಾಜಿ ಪ್ರಧಾನ ಮಂತ್ರಿ ಸುಹ್ರವರ್ದಿಯವರನ್ನು ವಿಚಾರಣೆಗೆ ಗುರಿಪಡಿಸಿ.

(ಕರಾಚಿ ಪತ್ರಿಕೆ)

—ಎಲ್ಲಾ ಮಾಜೀಗಳನ್ನು ಹೀಗೆಯೇ ಮಾಡಿದರೆ ಚೆನ್ನಯ್ಯ, ಎಂದು ನಮ್ಮ ಸ್ನೇಹಿತರ ಟೀಕೆ!

* * *

ಕಾಶ್ಮೀರದಲ್ಲಿ ಮಂಜು ಬಿದ್ದು ಭತ್ತ ನಾಶವಾಗಿ ಆಹಾರಾಭಾವವುಂಟಾಗಿ ಕ್ಷಾಮವಂತೆ.

—ಹೋಗಲಿ! ಹೊಟ್ಟೆ ಮೇಲೆ ತಣ್ಣಗೆ ಮಂಜಿನ ಬಟ್ಟೆಯನ್ನಾದರೂ ಹಾಕಿಕೊಳ್ಳಬಹುದಲ್ಲಾ!!

* * *

ಭಾರತದಿಂದ ಪ್ರಯೋಗಿಸಲ್ಪಡುವ ಮರಿಚಂದ್ರನಲ್ಲಿ ಇನ್ನು ಮುಂದೆ ಜಿಂಕೆಗಳನ್ನಿಟ್ಟು ಕಳಿಸುತ್ತಾರೆಂಬುದೂ, ರಷ್ಯಾದವರು ಕರಡಿಯನ್ನಿಡುವರೆಂದೂ, ಇಂಗ್ಲೆಂಡಿನವರು ಸಿಂಹದ ಮರಿಯನ್ನೂ, ಅಮೇರಿಕನ್ನರು ಹದ್ದನ್ನೂ, ಹೆಬ್ಬಿ ಗುಬ್ಬಾಲೆಯವರು ಆತ್ಮೀಯನ್ನೂ, ಇಡುವರೆಂಬುದು ಸುಳ್ಳಂತೆ.

* *

ಟಿ. ಟಿ. ಕೆ. ಯವರು ಆಕಳಿಸಿದಾಗ, ಅಗಾಧವಾಗಿ ಬಾಯಿ ತೆರೆಯುವರಂತೆ

—ಪಾಪ! ಬಡ್ಜೆಟ್ ಖೋತಾವನ್ನು ಯೋಚಿಸಿ ಯೋಚಿಸಿ ಬೇಸರ ಬಂದು ಬಾಯಿ ತೆರೆದರೆ ಖೋತಾದಂತೆಯೇ ಇರಬೇಕಲ್ಲವೇ?

ಉರಿಗಾಳು

ಚಂದ್ರಗ್ರಹಕ್ಕೆ ಇಷ್ಟರಲ್ಲೇ ಪ್ರಯಾಣ ಮಾಡಬಹುದು; ಆದರೆ, ಅಲ್ಲಿಂದ ಹಿಂತಿರುಗಲು ಸಾಧ್ಯವಾಗುವುದಿಲ್ಲ, ಎಂಬ ಸುದ್ದಿಯನ್ನು ಕೇಳಿದ ಅನೇಕ ಶಾಂತಿ ಪ್ರಿಯರು, ಆಗಲೇ ಟಿಕೇಟಿಗಾಗಿ ಕ್ಯೂ ನಿಂತಿರುವರಂತೆ.

* * *

ಅವರಲ್ಲಿ ಬಹುಭಾಗ, ತಮಗೋಸ್ಕರ ಟಿಕೇಟು ಕೊಳ್ಳುವವರಲ್ಲವಂತೆ; ಮಾಜಿ ಮಂತ್ರಿಗಳಿಗೆ ಉಚಿತವಾಗಿ ಟಿಕೇಟುಕೊಟ್ಟು, ಹೇಗೋ ಅವರನ್ನ ರವಾನಿಸುವುದಕ್ಕಾಗಿಯೇ, ಅವರು ಕೂ ನಿಂತಿದಾರಂತೆ.

* * *

"ಪಕ್ಷವೊಂದಕ್ಕೆ ೧೫ ದಿನದಂತೆ" ಎಂಬ ನಿಯಮವಿರುವ ಚಂದ್ರನಲ್ಲಿ ತಮಗೂ ಅಧಿಕಾರ ದೊರಕಬಹುದೆಂಬ ಆಸೆ ಅನೇಕ ನಾಯಕರಿಗೆ ಇದೆಯಂತೆ.

* * *

ಚಂದ್ರವದನೆಯರಿಗೂ ಈ ಚಂದ್ರವೇದನೆ ಪ್ರಾರಂಭವಾಗಿರುವುದು ಸೋಜಿಗ.

* * *

ಮೊನ್ನೆ, ಹಳ್ಳಿಯೊಂದರ ಶಾಲಾಮಾಸ್ತರು ಒಬ್ಬ ಹುಡುಗನನ್ನು ಚೆನ್ನಾಗಿ ಥಳಿಸಿದರಂತೆ. "ಏಕ್ರಿ?" ಎಂದು ಕೇಳಿದರೆ, "ಪೋಕರಿ ಹುಡುಗ! ಆ ರಷ್ಯನ್ ಕ್ಷಿಪಣಿಯ ಹತ್ತಿರ ಹೋಗಿ, ಬ್ಲೀಪ್ ಬ್ಲೀಪ್ ಅಂತ ಅದನ್ನ ಅಣಕಿಸುತ್ತಾನೆ; ಅದೆಲ್ಲಾದರೂ ರೇಗಿ, ಹುಡುಗನ ತಲೆ ಮೇಲೆ ಬಿದ್ದರೆ, ಗತಿ ಏನು? ತೀರ ಹತ್ತಿರ ಹೋಗಬೇಡ ಅಂತ ಎಷ್ಟು ಗದರಿಸಿದರೂ ಕೇಳುವುದಿಲ್ಲ" ಎಂದರಂತೆ.

* * *

ಈ ಭೂವಿಜ್ಞಾನ ಸಂಶೋಧನಾ ಸಂವತ್ಸರದಲ್ಲಿ ಇನ್ನೂ ಹತ್ತಾರು ಉಪಗ್ರಹಗಳನ್ನು ಅಂತರಿಕ್ಷಕ್ಕೆ ಹಾರಿಸುವ ಸಂಭವವಿರುವುದರಿಂದ, ಅವುಗಳನ್ನ ನೋಡುತ್ತ, ಜನ, 'ಅಗೋ, ಅಗೋ' ಎಂದು ಗುಂಪು ಗುಂಪಾಗಿ ನಿಂತಾಗ, ಅವರ ಕಿಸೆ ಕತ್ತರಿಸಲು ಅನುಕೂಲವಾಗುವುದು, ಎಂದು ಅನೇಕರು ಹಿಗ್ಗುತ್ತಿರುವರಂತೆ.

* * *

ಮುಂದಿನ ಕ್ಷಿಪಣಿ ಭೂಲೋಕದಿಂದೆದ್ದು, ಭುವರ್‌ಲೋಕವನ್ನು ಭೇದಿಸಿ, ಸುವರ್‌ಲೋಕವನ್ನೇ ತಲಪುವುದೆಂದು ವಿಜ್ಞಾನಿಗಳು ಶಪಥಮಾಡುತ್ತಿದಾರಂತೆ.

*　　　*　　　*

ದಿನವೊಂದಕ್ಕೆ ೧೫ ಸಲ ಭೂಮಿಯನ್ನು ಪ್ರದಕ್ಷಿಣೆ ಮಾಡುವ ಮಾನವಕೃತ ಚಂದ್ರ ಬ್ಲೀಪ್ ಬ್ಲೀಪ್ ಎನ್ನುವಾಗ .. ಭೂಸುಧಾರಣೆಯ ಮಾತಾಡುವವನು ಮೂಢ —ಎಂದು ಒಬ್ಬರು ಉದ್ಗಾರ ತೆಗಿದಿದಾರೆ.

*　　　*　　　*

ಭೂಮಿಯು ನಿಜವಾಗಿಯೂ ಗೋಳಾಕಾರವೇ ಎಂದು ಈ ಕ್ಷಿಪಣಿಯಿಂದ ತಿಳಿದುಬಂದಿದೆ....ಅದರ ಆಕಾರ ಗೋಳು ಎಂದು ನಾವು, ಇಷ್ಟು ಖರ್ಚು ವೆಚ್ಚ ಸಾಹಸ ಏನೂ ಇಲ್ಲದೆಯೇ ಹೇಳಬಲ್ಲೆವು!

*　　　*　　　*

ಬೆಂಗಳೂರು ನಗರದಲ್ಲಿ ಆಗಾಗ ವಿದ್ಯುದ್ದೀಪಗಳು ಆರಿಹೋಗುತ್ತಿರುವುದಕ್ಕೂ ಉಪಗ್ರಹದ ಸಂಚಾರಕ್ಕೂ ಯಾವ ಸಂಬಂಧವೂ ಇಲ್ಲ; ವಿದ್ಯುದ್ದೀಪಗಳು ಆರಿ ಹೋಗುವುದು ಬೆಂಗಳೂರಿನ ಸ್ಥಳೀಯ ವೈಶಿಷ್ಟ್ಯ ಮಾತ್ರ—ಎಂದು ಇಲಾಖೆಯ ವಕ್ತಾರರೊಬ್ಬರು ತಿಳಿಸಿದಾರೆ.

*　　　*　　　*

ರಷ್ಯನ್ ಉಪಗ್ರಹವನ್ನು ನೋಡಿದೆ, ಅದರ ಬ್ಲೀಪನ್ನು ಕೇಳಿದೆ, ಎಂದು ಹೇಳಿದ ಯುವಕನೊಬ್ಬನನ್ನು ಆಸ್ಪತ್ರೆಗೆ ಸೇರಿಸಲಾಗಿತ್ತಲ್ಲವೆ? ಈಗ, ಆತ ಗುಣ ಮುಖನಾಗುತ್ತಿದಾನೆ, ಎಂಬ ವರದಿ ಬಂದಿದೆ.

*　　　*　　　*

ಅಂತೆಯೇ, ನೂತನ ಗೃಹಪ್ರವೇಶ ಮಹೋತ್ಸವವನ್ನು ಬ್ರಂಹ್ಮಾಂಡದಲ್ಲೆಲ್ಲ ಕೊಂಡಾಡಲಾಯಿತೆಂಬ ವರದಿ ಬಂದಿದೆ.

*　　　*　　　*

ಓಡಿ ಬನ್ನಿ !

(ಸೆಪ್ಟೆಂಬರ್ ಕೊರವಂಜಿಯ 'ಮಾರ್ದನಿ'ಯಲ್ಲಿ ನಾವು ನಿರೀಕ್ಷಿಸಿದಂತೆ ಅಕ್ಟೋಬರಿನಲ್ಲಿ ಸುಹ್ರವರ್ದಿ ಸಾಹೇಬರು ಕೆಳಗಿಳಿದರು. ಅವರ ಸ್ಥಾನವನ್ನು ಆಕ್ರಮಿಸಲು 'ಓಡಿಬನ್ನಿ' ಎಂಬ ಕರೆ ಅಗತ್ಯವಿರಲಿಲ್ಲ.... ಆದರೂ... !)

ಆಹ! P-M ಪಟ್ಟ ತಾನದೊ
ತೆರವು ಬಿದ್ದಿದೆ ಬನ್ನಿರಿ!
ಏರಿ ಮೆರೆಯಲು ನಿಮ್ಮ ನಿಮ್ಮಯ
ಸಂಚು ಹೊಂಚನು ನಡೆಸಿರಿ!

ಬೇಗ ಬನ್ನಿರಿ! ಬೇಗ ಬನ್ನಿರಿ
ಇತರರೇರುವ ಮೊದಲೆ ಬನ್ನಿರಿ
ಪ್ರಧಾನಿ ಪೀಠವು ಬರಿದಿದೆ.
ತಡವ ಮಾಡದೆ ಓಡಿ ಬನ್ನಿರಿ
ಆಲಿ ಬನ್ನಿರಿ, ಖಾನ್ ಬನ್ನಿರಿ
ಚೌಧ್ರಿ ಚೂಂದ್ರಿಗಾರ್ರೆ ಬನ್ನಿರಿ
ಸಿಗುವಷ್ಟು ಬೆಂಬಲ ಗಳಿಸಿರಿ!

ಲೀಗ್ ರಿಪಬ್ಲಿಕ್ ಕೃಷಿಕ ಪಕ್ಷ
ಅವಾಮಿ....ಹುಂ....ಯಾರಾದರೇನು
ಸಿಗುವಷ್ಟು ಸಹಿಗಳ ಗಳಿಸಿರಿ
ಮಿರ್ಜಾ ಸಾಬರ ಕಾಣಿಸಿ
ಪ್ರಧಾನಿ ಪಟ್ಟವ ಬೇಡಿರಿ!

ಕಾಶ್ಮೀರ ಮಂತ್ರವ ಜಪಿಸುತ
ಇಂಡ್ಯವನ್ನೇ ಜರೆಯುತ
ಪ್ರಾಪ್ತಿಯಿರುವಷ್ಟೆಲ್ಲ ಕಾಲವು
P-M ಎನಿಸುತ ಮೆರೆಯಿರಿ!

ನಾಳೆ ಯಾರೊ ಎಂತೊ ಏನೋ
ಕಾಲೆಳೆದು ಬೀಳಿಸುವರೇನೋ
ಇಂದು ಮೆರೆಯಿರಿ ಬನ್ನಿರಿ
ಜಗದಿ ಶಾಶ್ವತವಾವುದಿಲ್ಲವು
ಓಡಿ ಬನ್ನಿರಿ ಬನ್ನಿರಿ!
P-M ಪೀಠವು ಖಾಲಿಬಿದ್ದಿದೆ
ಬನ್ನಿರೋ ನೀವ್ ಬನ್ನಿರಿ!

('ಕುವೆಂಪು' ಅವರ ಕ್ಷಮೆ ಬೇಡಿ)

(ಹುಂ....ಓಡಿ ಬಂದರು. ಸಂಚು ಹೊಂಚು ನಡೆಸಿದರು. ಕೊನೆಗೆ ಪೀಠವೇರಿದ .....ರವರಿಗೆ ಶೋಚನೆಗಳಿರಲಿ.)

—ರಾಮಿ.

— o —

★ ಪೆದ್ದ-ಪೆದ್ದಿ ★

ಅಪ್ಪಾ! ನಾನು ಮೆಡಿಕಲ್‌ನಲ್ಲಿ ಕಲಿಯುವ ವಿಷಯ ಎಂಥದು ಗೊತ್ತೆ?
ಕ್ಷಯದ ಚಿಕಿತ್ಸೆ!
ಅಯ್ಯೊ! ಹುಡುಗ! ಪೆದ್ದ ನೀನು! ಅದನೆ ಏಕೆ ಕಲಿಯಲು ಹೊರಟೆ?
ಮೆಡಿಕಲ್‌ನಲ್ಲಿ ಕ್ಷಯವನು ನೀನು ಕಲಿತೂ ಪದವಿಯ ಪೊಂದುವುದರೊಳಗೆ
ಕ್ಷಯವೇ ಇಲ್ಲದ ಕಾಲವು ಬಂದರೆ?

ಅಮ್ಮಾ! ನಾನು ಮೆಡಿಕಲ್‌ನಲ್ಲಿ ಕಲಿಯುವ ವಿಷಯ ಎಂಥದು ಗೊತ್ತೆ?
ಪ್ರಸವ ಚಿಕಿತ್ಸೆ!
ಅಯ್ಯೊ! ಹುಡುಗಿ! ಪೆದ್ದಿ ನೀನು! ಅದನೆ ಏಕೆ ಕಲಿಯಲು ಹೊರಟೆ?
ಮೆಡಿಕಲ್‌ನಲ್ಲಿ ಪ್ರಸವವ ನೀನು ಕಲಿತೂ ಪದವಿಯ ಪೊಂದುವುದರೊಳಗೆ
ಪ್ರಸವವೇ ಇಲ್ಲದ ಕಾಲವು ಬಂದರೆ?

—ಕುಟುಂಬರಾವ್.

ಕೊರವೇಶ್ವರ ವಚನಗಳು

ಭೂಲೋಕ ಚಂದ್ರಲೋಕವೆಂಬಿತ್ಯಾದಿ ಲೋಕಗಳು ಇನ್ನು ಬೇರೆ ಬೇರೇನಲ್ಲ ಕಾಣಿರೊ ! ಉಪಗ್ರಹವನೇರಿಸಿದಾಸಾಮಿಗಳು ಲೋಕ ಲೋಕಗಳನ್ನು ಮಲ್ಲೇಶ್ವರ ಬಸವನಗುಡಿ ಮೆಜಿಸ್ಟಿಕ್‌ಗಳಂತೆ ಒಂದನೊಂದಕೆ ಹೊಂದಿಸುವ ಕನಸು ಕಾಣುತಿಹರೊ! ಎಂದು ಘೋಷಿಸುತ ಬರುತಿಹನು ನಮ್ಮ ಕೊರವೇಶ್ವರ.

* * *

ರೇಡಿಯೋದೊಳಗೆಲ್ಲ ನೀನೆ ; ಪೇಪರೊಳಗೆಲ್ಲ ನೀನೆ ; ಸಂತೆಯೊಳಗೂ ನೀನೆ; ಜಾತ್ರೆಯೊಳಗೂ ನೀನೆ ! ಚಂದ್ರಮರಿ ! ನೀನು ಜನರ ಮನವ ಸೆರೆಹಿಡಿದಿರುವೆ ಕಣಾ! ಎಂದು ತಲೆದೂಗುತಿಹನು ನಮ್ಮ ಕೊರವೇಶ್ವರ.

* * *

ನಾವೊಂದು ನೆನೆದರೆ ದೈವ ತಾನೊಂದು ನೆನೆವುದು. ನಾವೆ ಮೇಲೆಂದುಕೊಂಡರೆ ದೈವ ಬೇರೊಬ್ಬರನು ಗಗನಕೇರಿಸುವುದು. ಉಪಗ್ರಹವ ಹಾರಿಸುವ ಧೀರ ಜನ ನಮ್ಮನುಳಿದು ಬೇರಿಲ್ಲವೆಂಬ ಭರವಸೆಯೊಳಿರಲು, ಕ್ರುಶ್ಚೇವ ಮೊದಲದನು ಬ್ಲಿಪ್.... ಬ್ಲಿಪ್... ಬ್ಲಿಪ್....ಎನಿಸಿ ಬೀಗುತಿಹನಲ್ಲ! — ಎಂದು ಹಲುಬುತಿರುವರ ಕಂಡು ಸಿಂಪತಿಸುತಿಹನು ನಮ್ಮ ಕೊರವೇಶ್ವರ.

* * *

ಸುತ್ತುತಿಹ ಚಂದ್ರಮರಿ ಡಲ್ಲೇಶರನು ಸೋಲೆಣಿಕೆಯಾಗಿ ಕಾಡಿತ್ತು ನೋಡ! ಕ್ರುಶ್ಚೇವರನು ಮದವಾಗಿ ಕಾಡಿತ್ತು ನೋಡ! ಕೆಲರೊಡಲಲ್ಲಿ ಚಳಿ ; ಕೆಲರೊಡಲಲ್ಲಿ ದರ್ಪ, ಕೆಲರೊಡಲಲ್ಲಿ ಕುಹಕ, ಕೆಲರೊಡಲಲ್ಲಿ ಕುತೂಹಲಗಳ ತುಂಬಿ ಸುತ್ತುತಿಹ ದಶಮಗ್ರಹದ ಸುದ್ದಿ ಕೇಳಿ ಜಾಮಾತರೆಲ್ಲ ಬೆರಳು ಮೂಗಾದುದನು ಕಂಡ ನಮ್ಮ ಕೊರವೇಶ್ವರ.

* * *

ಹೇಯ್....ಕೃತಕ ಉಪಗ್ರಹಗಳಿವು ಹೊಸದಲ್ಲ ಕಾಣಿರೊ ! ವಿಶ್ವಾಮಿತ್ರ ಸೃಷ್ಟಿಸಿದ್ದ ತ್ರಿಶಂಕುವಿಗಾಗಿ ಒಂದು ಲೋಕವನ್ನೆ ! ಇಪ್ಪತ್ತಮೂರಂಗುಲದ ಫುಟ್‌ಬಾಲ್ ಚೆಂಡಲ್ಲ ಕಾಣಿರೊ—ತ್ರಿಶಂಕುಸ್ಥಾನವನ್ನೆ ! ಎಂದು ಸನಾತನಪ್ಪ ಮೂಗೇರಿಸುತಿಹುದ ಕಂಡ ನಮ್ಮ ಕೊರವೇಶ್ವರ.

* * *

ಉಪಗ್ರಹಗಳನೆಷ್ಟು ಹಾರಿಸಿದರೇನು? ಕ್ಷಿಪಣಿಗಳನೆಷ್ಟು ಒಗೆದರೇನು? ನಮ್ಮ ವಿ. ವಿ. ಲಯದ ಎಮ್ಮೆಸ್ಸಿ, ಪೀಯಚ್ಡಿ ಡಿಗ್ರಿಗಳಿರದೆ ಯಾರೇನು ಮಾಡಿದರು ಶುದ್ಧ ದಂಡ! ಶುದ್ಧ ದಂಡ! ಎಂಬ ಅಶರೀರವಾಣಿಯನು ಕೇಳಿದನು ನಮ್ಮ ಕೊರವೇಶ್ವರ.

* * *

ಉಪಗ್ರಹದ ಚಿಂತೆ ನಮಗೇಕಯ್ಯ? ನಮ್ಮ ಚಿಂತೆ ನಮಗೆ ಸಾಲದೆ? ಡಾಲರ್ ದೊಡ್ಡಪ್ಪ ಒಲಿಯುವನೆ, ಒಲಿಯನೆ; ಸಾಲ ದೊರೆಯುವುದೆ, ದೊರೆಯದೆ, ಎಂಬ ಚಿಂತೆ ನಮಗೆ ಹಾಸಲುಂಟು ಹೊದೆಯಲುಂಟು ಎಂದು ಅವರಿವರು ಮೆತ್ತಗಾಗುತಿಹುದ ಕಂಡ ನಮ್ಮ ಕೊರವೇಶ್ವರ.

* * *

ಅವಕಾಶದೊರೆತವರೆಲ್ಲ ಸ್ಕಾಲರ್‌ಷಿಪ್ಪು, ಆಯೋಗ, ನಿಯೋಗ, ಅಲೆರೋಗ ವೆಂಬ ನೆಪದಿಂದ ವಿದೇಶಗಳ ಸುತ್ತಿ ಬರುತಿಹರಯ್ಯ! ಉಪಗ್ರಹಗಳ ಹಾರಿಸುವ ಜನ ನನಗದರೊಳಗೆ ಕೊಂಚ ಎಡೆಕೊಟ್ಟರಾದರೆ ಆಹ! ನೂರೊ ಸಾವಿರಸಲವೊ ಭೂಪ್ರದಕ್ಷಿಣೆಗೈಯ್ಯುತಿದ್ದೆನಯ್ಯ! ಎಂದು ಸೆಣಕಲು ಜೀವಿಯೊಬ್ಬ ಕೈಕೊಡಹುತಿಹುದ ಕಂಡ ಕೊರವೇಶ್ವರ.

* * *

ಕಾಸುಳ್ಳವರು ಸ್ಯಾಟಲೈಟುಮಾಡಿ ಹಾರಿಸುವರು; ನಾವು ಇಂಡ್ಯನರೇನು ಮಾಡಲುಂಟು? ಬಡವರಯ್ಯ! ಆಕಾಶಬುಟ್ಟಿಗಳೆ ನಮ್ಮ ಉಪಗ್ರಹಗಳಯ್ಯ! ದೀಪಾವಳಿಯ ದಿನ ರಾತ್ರಿ ಉಂಡು ಮಲಗಿರಲು ಆಕಾಶಬುಟ್ಟಿಯೊಂದು ಗಿರಗಿರನೆ ಭೂಮಿಯ ಸುತ್ತ ಸುತ್ತಿದುದ ಕಂಡೆನಯ್ಯ! ಎಂದೊಬ್ಬ ಬಡಪಾಯಿ ಹಲ್ಗಿರಿಯುವುದನು ಕಂಡ ನಮ್ಮ ಕೊರವೇಶ್ವರ.

* * *

ಕಾಂಬುದೆಲ್ಲವ ಕಂಡು ಕೇಳ್ವುದೆಲ್ಲವ ಕೇಳಿ ಕೊರವೇಶ ಘೋಷಿಸುತಿಹನಿಂತು ಕೇಳಿರಯ್ಯ! ಎನಿತು ಉಪಗ್ರಹಗಳ ಹಾರಿಸಿದರೇನಯ್ಯ, ಎದೆಯಕ್ಕೈಬ್ಯಕ್ಕೆ ಅವುಗಳಿಂ ಮುಗಿವುಂಟೆ? cold warಉ ಕೊನೆಗಾಂಬುದುಂಟೆ? ಮಾನವನ ಮತಿಯ ಮಿಂಚು ಮಿಂಚಿದಷ್ಟು ಒಳಗಡೆಯ ಕತ್ತಲು ದಟ್ಟವಾಗುತಿಹುದಯ್ಯ! ಇದು ಸತ್ಯವಯ್ಯ! ಎಂಬನು ಮಹಾ ಸಿನಿಕ ನಮ್ಮ ಕೊರವೇಶ್ವರ.

* * *

— ರಾಮಿ.

ಬೆಳಿಗ್ಗೆ-ಸಂಜೆ

ತುಮಕೂರಿಂದ ಬೆಂಗ್ಳೂರಿಗೆ
ಬೆಳಗಿನ ರೈಲು, ನೋಡಿದಿರಾ ?
ಮಾತೇ ಇಲ್ಲ, ಒಬ್ಬರ ಬಾಯ್ಲೂ
ಏನೋ ಚಿಂತೆ, .. ಲೆಕ್ಕಾಚಾರ ;
ಲಾಯರ ಫೀಜು, ಮಂತ್ರಿಯ ಭೇಟಿ;
ಪೇಟೆಧಾರಣೆ, ವರಗಳ ಬೇಟೆ ;
ಟೆಂಡರ್ ನೋಟೀಸ್ ; ಅಡ್ಜರ್ನ್‌ಮೆಂಟು ;—
ಏನೋ ಚಿಂತೆ, ಮಾತೇ ಇಲ್ಲ ;
ಮೌನವೆ,....ಬೆಳಗಿನ ಡಬ್ಬಿಯ ತುಂಬ.

* * *

ಬೆಂಗ್ಳೂರಿಂದ ತುಂಕೂರಿಗೆ
ಸಂಜೆ ರೈಲು, ನೋಡಿದಿರಾ ?
ಮಾತೇ ಮಾತು, ಎಲ್ಲರ ಬಾಯ್ಲೂ
ಏನೋ ಹಿಗ್ಗು ! ಸಿಕ್ಕಾಪಟ್ಟೆ !
ಲಾಯರು ಸಿಕ್ಕ, ಫೀಜೂ ಅಗ್ಗ !
ಮಂತ್ರಿಯು ನಕ್ಕ ; ಲಕ್ಕೇ ಲಕ್ಕು !
ಪೇಟೇ ಅಗ್ಗ ! ಕೊಳ್ಳೋ ಮಾಲಿಗೆ
ಬೆಲೆಗಳು ಏರಿದೆ, ಮಾರೋ ಮಾಲಿಗೆ
ವರನೂ ಒಪ್ದ, ವರದಕ್ಷಿಣೇಗೆ—
ಏನೋ ಹಿಗ್ಗು ! ಬಡಬಡ ಮಾತು !
ಖುಷಿಯೆ !....ಸಂಜೆಯ ಡಬ್ಬಿಯ ತುಂಬ.

— ಪಾಟಾಳಿ.

ರಾಯರ ದೀ(ತಾ)ಸಾವಳಿ!

"ಅಲ್ಲಾಂದ್ರೇ ?........ಕಾಗದ ಹಾಕಿದಿರಾ ?... ....ಕರೆಸಲ್ವೇ ಅಳಿಯಂದಿರನ್ನ ಹಬ್ಬಕ್ಕೆ.... . ?"....ನೆನಪಿಗೆ ತರುತ್ತಲೇ ಇದ್ದಳು ಆಕೆ ನಾಲ್ಕುದಿನದಿಂದ.

ರಾಯರಿಗೆ ಪಾಪ ಇದ್ದಕ್ಕಿದ್ದ ಹಾಗೇ ಅವತ್ತು ನಡುಕ ಪ್ರಾರಂಭವಾಗಿಬಿಟ್ಟಿತು! "ಯಾಕೋ ಛಳಿಛಳಿ ಕಣೇ! . ....ಮೈ ಬಿಸಿಬಿಸಿ ಆಗುತ್ತೆ, ಮತ್ತೆ ಛಳಿಛಳಿ ಆಗುತ್ತೆ!....... ತಲೆ ತೂಕ, ಕಣ್ಣು ಮಂಜು, ಕಿವೀಲಿ ಕೂಗು!........ಎಲ್ಲೋ ಈಗ ಸಾರ್ವಜನಿಕವಾಗಿರೋ ಖಾಯಿಲೆ—'ರಕ್ತದ ಒತ್ತಡ' ಬೆನ್ನು ಹತ್ತಿರಬೇಕು" ಅಂತ ಬಿಸುಸುಯ್ದರು. ಆರಾಮ ಕುರ್ಚೀಲಿ ಅಡ್ಡಾದರು, ಮಂಚದಲ್ಲಿ ಮುದುರಿದರು, ಮಲಗಿದರು, ಮುಲುಗಿದರು!....... ಗಲಾಟೆ ಗದ್ದಲ ತಡೆಯದ್ದರಿಂದ ಹಬ್ಬದ ಕಾರ್ಯಕ್ರಮಾನ-ಅಳಿಯದೇವರನ್ನು ಆಹ್ವಾನಿಸೋದನ್ನ—ರದ್ದುಗೊಳಿಸಬೇಕಾಗಿ ಬಂದಿದೆಯೆಂದು ಮಮ್ಮಲ ಮರುಗಿ ಬೀಗರಿಗೆ ಕಾಗದ ಬರೆದರು ರಾಯರು.

ಎರಡು ದಿನಗಳಮೇಲೆ ಗಂಟುಮೂಟೆ ಕಟ್ಟುತ್ತಿದ್ದ ರಾಯರನ್ನು ಕಂಡು ಆಕೆ ಆಶ್ಚರ್ಯದಿಂದ ಕೇಳಿದಳು—"ಎಲ್ಲಿಗೆ ?" ಅಂತ.

"ಹೇಗೂ ಸಾವ್ಕಾರ ಹಬ್ಬಕ್ಕೇಂತ ಆರು ದಿನ ರಜ, ಇನ್ನೂರು ಅಡ್ವಾನ್ಸ್ ಮಂಜೂರುಮಾಡಿದಾನೆ. ದಕ್ಷಿಣಕ್ಕೆ ಹೋಗಿ ದೇವರ ದರ್ಶನಾ ಮಾಡಿಕೊಂಡು ಬರ್ತೀನೆ!" ಅಂದರು ರಾಯರು ಅರ್ಥವತ್ತಾಗಿ ನಗುತ್ತ. ರಾತ್ರಿ ರೈಲಿನಲ್ಲಿ ಮೂರನೇ ಡಬ್ಬಿ ಮೂಲೇಲಿ ಕೂತೇಬಿಟ್ಟರು!

ಕಂಚಿ ಕಾಮಾಕ್ಷಮ್ಮನ್ನ ಕಂಡು, ಮಧುರೆ ಮೀನಾಕ್ಷಮ್ಮನ್ನ ಮಾತಾಡಿಸಿ, ಕುಂಭಕೋಣದಲ್ಲಿ ಕುಂಭೇಶ್ವರ ಗುಡೀ ಕಂಭ ಸುತ್ತಿ, ಚಿದಂಬರಕ್ಕೆ ಚಿತ್ತೈಸಿತು ರಾಯರ ಸವಾರಿ. ಆಹಾ! ಏನು ಸೌಂದರ್ಯ ನಟರಾಜಮೂರ್ತಿಯದು! ನೋಡಿ ಬೆರಗಾಗಿ ಬಾಯಿಬಿಟ್ಟ ರಾಯರು, ತಮಗರಿವಿಲ್ಲದಂತೆಯೇ ಕಾಲೆತ್ತಿ ನಿಂತರು ನಟರಾಜ ಭಂಗಿಯಲ್ಲಿ!

"ಓಹೋ! ...... ಇದೇನು ? ...... ರಾಯರು!....... ಇಲ್ಲಿ!........" ಬೆನ್ನ ಮೇಲೊಂದು ಬಲವಾದ ಕೈಬಿತ್ತು! ಭುಜ ಸವರಿಕೊಳ್ಳುತ್ತಾ ಹಿಂದಿರುಗಿದರು ರಾಯರು. ಸಾಕ್ಷಾತ್ ಬೀಗರು, ಅಳೀಮಯ್ಯನ ಸಂಗಡ!....... ರಾಯರು ಬಿಟ್ಟ

ಬಾಯಿ ಬಿಟ್ಟೇ ಇತ್ತು! ನಟರಾಜನನ್ನು ಅನುಕರಿಸಿದ್ದ ಕಾಲು ಹಾಗೇ ಕೋರೆ ಹೋಯ್ತು!

"ಯಾಕೆ? .. ....ರಾಯರಿಗೆ ನೆಟ್ಟಗಿಲ್ಲವೇ ಇನ್ನೂ? . ....ತ್ಸು ತ್ಸು ತ್ಸು ತ್ಸು! ಪಾರ್ಶ್ವವಾಯು ಸಂಬಂಧ ಇದ್ದ ಹಾಗಿದೆ ಪಾಪ!.... ಚಿಂತಿಲ್ಲ, ನಾವಿದ್ದೇವೆ ನಿಮ್ಮ ಹಿತಚಿಂತಕರು; .. ... ಅಲ್ವೇನೋ ಮಗು?... ...." ಅಂತ ಸಿಂಪತೈಸಿದರು ಬೀಗರು.

ಅಂಗರಕ್ಷಕರಂತೆ ರಾಯರ ಎಡ ಬಲ ಹಿಡಿದ ತಂದೆ ಮಗನ ನೆರಳಲ್ಲಿ ರಾಯರಿಗೆ ಕೈಕಾಲಾಡಿಸುವ ಕಷ್ಟವೇ ತಪ್ಪಿತು! ಗುಡಿಯಲ್ಲಿ ಎಲ್ಲರ ಹೆಸರಿನಲ್ಲಿ ಮಾಡಿಸಿದ ಅರ್ಚನೆಗಳ ಶುಲ್ಕವನ್ನೂ ರಾಯರ ಪರ್ಸಿನಿಂದ ಬೀಗರೇ ತೆಗೆದುಕೊಟ್ಟರು. ಮಂಗಳಾರತಿಗೆ ಅವರೇ ದುಡ್ಡು ಹಾಕಿದರು—ಅದೇ ಪರ್ಸಿನಿಂದ ತೆಗೆದು!

"ರಾಯರು ಉಳಕೊಂಡಿರೋ ಹೋಟಲು ಯಾವುದೋ?........ಆ?........ ನಟರಾಜ ಭವನವೇ? .. ....ಅದೇ, ಸ್ಟೇಷನ್ ಎದುರಿಗಿರೋದು!........ಒಳ್ಳೇದೇ ಆಯ್ತು....... ಮಗೂ, ಮಾವಯ್ಯನ ರೂಮಿಗೇ ನಮ್ಮ ಸಾಮಾನೂ ಸಾಗಿಸಿ ಬಿಡೋಣಪ್ಪ....... ಪಾಪ, ಅವರೊಬ್ಬರೇ ಆದಾರು!" — ಎಂದು ಬಿಸಿಯುಸಿರು ಬಿಟ್ಟು, ಬುಟ್ಟಿ, ಬಟ್ಟೆ ಗಂಟಿನೊಂದಿಗೆ ರಾಯರ ರೂಮು ಸೇರಿದರು—ಅವರ ಗಾಡಿಯನ್ನೇರಿ. ಊಟ ತಿಂಡಿ ಮೇಲ್ವಿಚಾರಣೇನ ತಾವೇ ವಹಿಸಿಕೊಂಡರು— ಮಾಣಿಗೆ ಮಸಾಲ್ದೋಸೆ, ಬೊಂಬಾಯಿ ಭೋಂಡ, ಬಾಲೂಷಾಗಳಿಗೆ ಅಪ್ಪಣೆ ಕೊಡುತ್ತ, ತಮ್ಮ ಬಿಲ್ಲನ್ನೂ ರಾಯರದಕ್ಕೇ ಸೇರಿಸೆಂದು ಮ್ಯಾನೇಜರಿಗೆ ಮುನ್ನೆಚ್ಚರಿಕೆ ಇತ್ತರು!

"ರಾಯರ ವ್ಯಾಪಾರ........ಯಾವ್ಯಾವ ಊರಿನಲ್ಲಿ ಏನೇನಾಗಿದೆಯೋ?.... ಓಹೋ! ಚೆನ್ನಾಗೇ ತೆಗೆದಿದೀರಿ, ಸಂತೋಷ! .... ಅಂದಹಾಗೇ, ನಿಮ್ಮ ಅನಾರೋಗ್ಯದ (?) ದೆಸೆಯಿಂದ....ಹಿಹಿಹಿ ...ನಮ್ಮ ಹುಡುಗನಿಗೆ ಆರತಿ - ಅಕ್ಷತೆ ಅದ್ಧೂರಿ—ಖರ್ಜೀಕಾಯಿ — ಇಡಿಗಾಯಿ—ಎಲ್ಲ ತಪ್ಪಿಹೋಯ್ತು! ಹೋಗಲಿ, ಇನ್ನೇನು ಮಾಡಕ್ಕಾಗುತ್ತೆ; ಇಲ್ಲೇ ಏನಾದರೂ ಉಡುಗೊರೆ ತೆಕ್ಕೊಟ್ಟುಬಿಡಿ ರಾಯರೇ—ಅನಾಯಾಸವಾಗಿ ಸೇರಿದೇವೆ ಹಬ್ಬದಲ್ಲಿ!........ನಿಮಗಂತೂ ಅರನೇ ಅಳೀಮಯ್ಯ ಅಂತ ಅಷ್ಟಾಗಿ ಅಕ್ಕರಾಸ್ಥೆ ಇಲ್ಲದಿದ್ದೀತು; ಆದರೆ, ಅವನಿಗೆ ಇದು ಇನ್ನೂ ಮೊದಲ ಮದುವೆತಾನೇ!" ಅಂತ ಕೊರಗುತ್ತ ರಾಯರನ್ನು ಕೇಳಿದರು ಬೀಗರು.

"ಅಯ್ಯೋ! ಚಿದಂಬರದಲ್ಲಿ ಏನು ಸಿಕ್ಕುತ್ತೆ?—ಸುಗಂಧದ ವಿಭೂತಿ ಪೊಟ್ಟಣ ಬಿಟ್ಟರೆ?" ನಕ್ಕರು ರಾಯರು ಧೈರ್ಯವಾಗಿ.

"ಚಿಂತೆಯಿಲ್ಲ, ಕಂಚೀಲಿ ತೆಗೆದಿದೀರಲ್ಲ ನಿಮಗೆ ಅಂತ, ಅದೇ ಧೋತೀಶಲ್ಯಾನೇ ಕೊಟ್ಟುಬಿಡಿ ಅಳಿಮಯ್ಯನಿಗೆ. ಹಾಗೇ–ನಮ್ಮ ಬೀಗಿತ್ತಿಮ್ಮನಿಗೆ ಕೊಂಡಿಟ್ಟಿದೀರಲ್ಲ ಸೀರೆ.......ಜರಿ ಕೊಂಚ ಕಮ್ಮೀನೇ,....ಹೋಗಲಿ, ಇನ್ನೇನು ಮಾಡಕ್ಕಾಗುತ್ತೆ.... ಅದನ್ನೇ ನಿಮ್ಮ ಮಗಳಿಗೆ ನನ್ನ ಪರವಾಗಿ ಓದಿಸಿ ಕೊಟ್ಟುಬಿಡಿ ಊರಿಗೆ ಹೋದ ಕೂಡಲೇ !........" ನಯವಾಗಿ ಸಲಹೆಕೊಟ್ಟರು ಬೀಗರು.

"ಆದರೆ....... ಬೀಗ ಮಹಾಶಯಾ! ನನ್ನ ಬೀಗದಕ್ಕೆ—ಅಂದರೆ ನಿಮ್ಮ ಬೀಗಿತ್ತೀನ—ಕೇಳದೇ ಯಾಹ ಧೈರ್ಯಮಾಡಿ ಕೊಟ್ಟೇನು ?" ನುಣುಚಿಕೊಳ್ಳುವ ಕೊನೇ ಪ್ರಯತ್ನ ರಾಯರದು.


"ಹಹಹಹ! ನಮ್ಮ ಬೀಗಿತ್ತಿ—ಅರ್ಥಾತ್ ನಿಮ್ಮ ಬೀಗದಕ್ಕೆಯೇ ನಮಗೆ ಬರೆದು ತಿಳಿಸಿದ್ದು — ನೀವು ಹೀಗೆ ದಕ್ಷಿಣ ದೇಶಾಟನೇಗೆ ದಯಮಾಡಿಸಿರೋ ಸಮಾಚಾರಾನ!"

* * *

ರಾಯರು ಹಾಸಿಗೆ ಹಿಡಿದಿದಾರೆ ಹತ್ತು ದಿನದಿಂದ—'ರಕ್ತದ ಒತ್ತಡ' ಹತ್ತಿ.

— ಸುನಂದಮ್ಮ.

— ೧ —



ಮನೆಯಿಂದ ಫೋನ್ ಇರಬಹುದು ಸುಮ್ಮನೆ ಇದ್ದುಬಿಡೋಣ ಕಣೋ !!

ದೊಂಗಲುನ್ನಾರು-ಜಾಗ್ರತ !

ಏಬಿರುವಲ್ಲಿ 'ಇಲ್ಲಿ ಏಬಿದೆ' ಎಂದು ಹೇಳಿಕೊಳ್ಳುವುದಕ್ಕೂ ಕೊಂಚ ಎದೆಗಾರಿಕೆ ಬೇಕು. ಜ್ಞಾನವಂತರು 'ನಾಯಿಗಳಿವೆ ಎಚ್ಚರಿಕೆ' ಎಂಬುದಾಗಿ ಎಂದಂದಿನಿಂದಲೂ ಎಚ್ಚರಿಸುತ್ತಾ ಬಂದಿದ್ದಾರೆ. ರೈಲಿನವರು ನರಕುರಿಗಳನ್ನು ತುಂಬುವ ಡಬ್ಬಿಗಳಲ್ಲಿಯೂ ಪ್ಲಾಟ್‌ಫಾರಂಗಳಲ್ಲಿಯೂ 'ದೊಂಗಲುನ್ನಾರು-ಜಾಗ್ರತ!' ಎಂದು ಬಹಳ ಹಿಂದಿನಿಂದಲೂ ಎಚ್ಚರಕೊಡುತ್ತಿದ್ದರು. ಅಂತರ್ಗತವಾದ ದೋಷವನ್ನು ಈ ರೀತಿ ಘಂಟಾಘೋಷವಾಗಿ ಸಾರುವ ಈ ತತ್ವಕ್ಕೆ ಈಗೀಗ ಹೆಚ್ಚಿನ ಮನ್ನಣೆ ದೊರೆಯುವ ಲಕ್ಷಣಗಳು ಕಾಣಬರುತ್ತಿವೆ. ಅಮೇರಿಕದ ಸೆನಟ್ ಸಭೆಯ ಸದಸ್ಯ ವಾಲೇಸ್ ಬೆನಟ್ ಎಂಬುವರು ಒಂದು ಹೊಸ ಮಸೂದೆಯನ್ನು ಅಲ್ಲಿನ ಸೆನಟ್‌ನಲ್ಲಿ ಮಂಡಿಸಿ ಇದ್ದಾರಂತೆ. ಅದರ ಪ್ರಕಾರ ಪ್ರತಿಯೊಂದು ಸಿಗರೇಟ್ ಪ್ಯಾಕಿನಮೇಲೂ ಈ ರೀತಿ ಬರೆದಿರುವ ಒಂದು ಲೇಬಲ್ ಇರಬೇಕಂತೆ :

> **"ಎಚ್ಚರಿಕೆ! ಇದರೊಳಗಿರುವುದನ್ನು ಬಿಡದೆ ಉಪಯೋಗಿಸಿದರೆ ಕ್ಯಾನ್ಸರ್ ರೋಗ ಹಾಗೂ ಹೃದಯ ಶ್ವಾಸಕೋಶಗಳ ರೋಗಗಳು ಉಂಟಾದಾವು !"**

ಈ ರೀತಿ ಎಚ್ಚರಿಸುವುದರಿಂದ ಉಂಟಾಗುವ ಪ್ರತಿಕ್ರಿಯೆಗಳೇನು ? ಇಂಥ ಭಯಂಕರ ರೋಗದಾಯಕ ವಸ್ತುವನ್ನು ಸಿಗರೇಟು ಭಕ್ತರು ಮುಂದೆ ಕಾಸು ಕೊಟ್ಟು ಕೊಂಡುಕೊಂಡಾರೆ ? ಸಿಗರೇಟು ಕಂಪೆನಿಗಳೆಲ್ಲ ಪಾಪರಾಗದಿರುತ್ತವೆಯೆ ? ಇದಕ್ಕೆ ಉತ್ತರ ದೊರೆಯಬೇಕಾದರೆ ಬೇರೆ ಕೆಲವು ಪ್ರಶ್ನೆಗಳನ್ನು ಹಾಕಿಕೊಳ್ಳಬೇಕು.

'ನಾಯಿಗಳಿವೆ-ಎಚ್ಚರಿಕೆ!' ಎಂದು ಬೋರ್ಡು ತಗುಲಿಹಾಕಿಕೊಂಡವರ ಮನೆಗೆ ಕೆಲಸವಿದ್ದವರು (ಕೆಲಸವಿಲ್ಲದವರು ಕೂಡ) ನುಗ್ಗುವುದನ್ನು ಬಿಟ್ಟರೆ ? ರೈಲಿನಲ್ಲಿ 'ದೊಂಗಲುನ್ನಾರು' ಎಂದು ಎಷ್ಟೇ ಎಚ್ಚರಿಸಿದರೂ ರೈಲು ಪ್ರಯಾಣವನ್ನು ಯಾರಾದರೂ ತ್ಯಜಿಸಿದರೆ ? 'ಇಲ್ಲ' ಎಂಬುದೊಂದೇ ಉತ್ತರ.

ಚಂದಾ ಕೇಳಲು, ಸಾಲ ಕೇಳಲು, ಸೀಟು, ನೌಕರಿ ಭಡತಿ, ಬಾಡಿಗೆ ಮನೆ, ಕೇಳಲು ಹೊರಟವರೂ, ವರಾನ್ವೇಷಿಗಳೂ, ಉದ್ಯೋಗವಿಲ್ಲದೆ ಉದ್ಯೋಗ ಬೇಕಾಗದೆ, ಯಾರನ್ನಾದರೂ ಬೋರುಮಾಡುತ್ತಲೇ ಇರಬೇಕಾದವರೂ ಕೊನೆಗೆ

ತಸ್ಕರರೂ, ತಲೆಯೊಡಕರೂ ಕೂಡ 'ನಾಯಿಗಳಿವೆ' ಎಂಬ ಎಚ್ಚರಿಕೆಯನ್ನು ಗಮನಿಸುವುದೇ ಇಲ್ಲ. ನಾಯಿಗಳೇಕೆ, ಸಿಂಹವಿದ್ದರೂ ಬರಲಿ ಎಂದುಕೊಂಡು ತಮ್ಮ ಛತ್ರಿ, ಊರೆಗೋಲು ಅಥವಾ ಬಡಿಗೆಯನ್ನೊಮ್ಮೆ ನೋಡಿಕೊಂಡು ತಮ್ಮ ಕಾರ್ಯಸಾಧನೆಗಾಗಿ ಎಂಥ ಕೋಟೆಯೊಳಗಾದರೂ ನುಗ್ಗಿಯೇ ನುಗ್ಗುತ್ತಾರೆ! 'ನಾಯಿಗಳಿವೆ' ಎಂಬ ಹಲಗೆ ಬೇರೆ ಯಾವುದೋ ಒಂದು ವಿಧದ ಆತ್ಮತೃಪ್ತಿಯನ್ನು ನೀಡಬೇಕೇ ಹೊರತು ಸಂಬಂಧಪಟ್ಟವರ ನಿಜವಾದ ಉದ್ದೇಶ ಈಡೇರುವುದಿಲ್ಲವೆಂದು ಕಾಣುತ್ತದೆ.

ಹಾಗೆಯೇ ರೈಲಿನವರ ಎಚ್ಚರಿಕೆಯ ವಿಚಾರ. ರೈಲಿನಲ್ಲಿ ಕಳ್ಳರ ಗುಂಪೇ ಇದೆ ಎಂದರೂ ಜನರು ರೈಲು ಹತ್ತುತ್ತಲೇ ಇರುತ್ತಾರೆ. ಬಾಗಿಲು ಮೂಲಕ ಮಾತ್ರವಲ್ಲ ಕಿಟಕಿಗಳ ಮೂಲಕ ಕೂಡ ತೂರಿಕೊಳ್ಳುತ್ತಾರೆ. ತಮ್ಮ ಪರ್ಸ ಗಿರ್ಸ, ಥೈಲಿ, ಚೈನು, ವಾಚು, ಪೇನಾದಿಗಳನ್ನು ಕಳೆದುಕೊಳ್ಳುತ್ತಲೇ ಇರುತ್ತಾರೆ. 'ದೊಂಗಲುನ್ನಾರು' ಬೋರ್ಡಿನಿಂದ ಒಂದೇ ಒಂದು ಪ್ರಯೋಜನವಿದೆ. ಆದರೆ ಅದು ದೊಂಗಲುಗಳ ಪಾಲಿಗೇ! ಅದನ್ನು ಕಂಡಕೂಡಲೆ ಪರ್ಸಿನವರ ಕೈ ಅದಿರುವ ಜಾಗವನ್ನು ಒಮ್ಮೆ ತಡವಿ ನೋಡಿ ಭದ್ರ ಎಂದು ಖಾತ್ರಿಮಾಡಿಕೊಳ್ಳುತ್ತದೆ. ಇದರಿಂದ ಕಿಸೆಗಳ್ಳರಿಗೆ ತಮ್ಮ ಗುರಿ ಎಲ್ಲಿದೆ ಎಂದು ಕಂಡುಕೊಳ್ಳಲು ಸುಲಭವಾಗುತ್ತದೆ.

ಹೀಗಿರುವಾಗ ಸಿಗರೇಟು ಪ್ಯಾಕುಗಳು ಎಂಥ ಎಚ್ಚರಿಕೆಯ ಮಾತುಗಳನ್ನೇ ಹೊತ್ತು ಬರಲಿ ಅದರ ಪರಿಣಾಮವೇನೆಂಬುದನ್ನು ವಿವರಿಸಿ ಹೇಳಬೇಕಾಗಿಲ್ಲ. ನಿಜವಾದ ವಿಷವನ್ನೇ ಬೆರೆಸಿ POISON ಎಂದು ಲೇಬಲ್ ತಗುಲಿಸಿದರೂ ಚಟವಂತರು ತಂತಮ್ಮ ಚಟದ ವಸ್ತುಗಳನ್ನು ಬಿಟ್ಟೇಬಿಡುತ್ತಾರೆಂದು ಧೈರ್ಯವಾಗಿ ಹೇಳುವ ಹಾಗಿಲ್ಲ! ದೇಹ ಯಂತ್ರದ ೯೦ ಪಾಲು ಸಾಮಗ್ರಿಗಳೆಲ್ಲ ಒಂದಲ್ಲ ಒಂದು ಬಗೆಯ ರೋಗಕ್ಕೀಡಾಗಿದ್ದರೂ ಕೇವಲ ಒಂದು ರಾತ್ರಿಯ ಮಟ್ಟಿಗೆ ಸಿಗರೇಟನ್ನು ಬಿಟ್ಟಿರಲಾರದೆ, ನಡುರಾತ್ರಿಯಲ್ಲಿ ಕಸದ ಬುಟ್ಟಿಯಿಂದ ನಾಲ್ಕು ತುಂಡುಗಳನ್ನು ಆರಿಸಿ ತಂದು ಚಪಲ ತೀರಿಸಿಕೊಂಡ ಮಹಾನುಭಾವರಿದ್ದಾರೆ ಅಮೇರಿಕದ ಸೆನೆಟರ ಹೊಸ ಮಸೂದೆಯ ಸುದ್ದಿ ತಿಳಿದರೆ ಅವರು ಸೂಕ್ತವಾದ ಒಂದು ಲೇಬಲ್ ಬರೆದು ಆ ಸೆನೆಟರ ತಲೆಯಮೇಲೆ ಅಂಟಿಸುವುದು ಒಳ್ಳೆಯದೆಂದು ಸಲಹೆಕೊಡದಿರಲಾರರು.

ಮಹಾ ಕುಡುಕನೊಬ್ಬನಿಗೆ ಕುಡುಕತನದ ಅಪಾಯವನ್ನು ಮಂದಟ್ಟುಗೊಳಿಸಲು ಒಂದು ಪ್ರಯೋಗಮಾಡಿ ತೋರಿಸಿದರಂತೆ ಒಬ್ಬ ಡಾಕ್ಟರು. ಒಂದು ಗ್ಲಾಸಿನಲ್ಲಿ ಶುದ್ಧವಾದ ನೀರು ಇನ್ನೊಂದರಲ್ಲಿ ಒಂದಷ್ಟು ಸ್ಕಾಚ್ ವಿಸ್ಕಿ ತಂದಿಟ್ಟು ಎರಡರೊಳಗೂ ಒಂದೊಂದು ಹುಳುವನ್ನು ಬಿಟ್ಟಾಗ ಸ್ಕಾಚಿನೊಳಕ್ಕೆ ಬಿಟ್ಟ ಹುಳು

ಒಂದುಕ್ಷಣ ಒದ್ದಾಡಿ ಸತ್ತು ಗ್ಲಾಸಿನ ತಳ ಸೇರಿತು. ಆದರೆ ನೀರಿನಲ್ಲಿ ಬಿದ್ದ ಹುಳು ಸುಖವಾಗಿ ಈಜುತ್ತಿತ್ತು. ಡಾಕ್ಟರು ತನ್ನ ಕುಡುಕ ರೋಗಿಯ ಹೊಟ್ಟೆಯಲ್ಲಿ ಭೀತಿಯ ಚಳಿ ಹುಟ್ಟಿಸುತ್ತಿದ್ದೇನೆಂಬ ಭರವಸೆಯಿಂದ "ಕಂಡೆಯಾ?" ಎಂದು ಗಂಭೀರವಾಗಿ ಕೇಳಿದರಂತೆ. ಅದಕ್ಕೆ ಈ ಆಸಾಮಿ "ನನಗೆ ಮೊದಲಿನಿಂದಲೂ ಹುಳದ ಉಪದ್ರವ ಕಡಿಮೆ; ಏಕೆಂದು ತಿಳಿಯಿತು!" ಎಂದು ತುಂಬ ಉತ್ಸಾಹದಿಂದ ಹೇಳಿದಾಗ ಡಾಕ್ಟರಿಗೆ ಸ್ಮೃತಿ ತಪ್ಪಿತೋ ಏನೋ ಗೊತ್ತಿಲ್ಲ. ಅದೇನಿದ್ದರೂ ಸಿಗರೇಟುಗಳಮೇಲೆ ಕಣ್ಣಿಟ್ಟ ಆ ಅಮೇರಿಕದ ಸೆನಟರ್ ಎಂಥ ಷಾಕಿಗೂ ಸಿದ್ಧನಾಗಿರಬೇಕು!

ಒಂದುವೇಳೆ ಆತನ ಮಸೂದೆಗೆ ತಳಹದಿಯಾಗಿರುವ ದೊಂಗಲುನ್ನಾರು ತತ್ವ ಸಾರ್ವತ್ರಿಕವಾಗಿ ಹಬ್ಬುವುದಾದರೆ ಏನಾಗಬಹುದು? ಅಕ್ಕಿ ಚೀಲದಮೇಲೆ 'ಕಲ್ಲು ಮರಳು ಇವೆ' ಎಂಬ ಬೋರ್ಡು ಬೇಕಾಗಬಹುದು. ಹಾಲಿನ ಪಾತ್ರೆಗಳ ಕತ್ತಿನಲ್ಲಿ 'ನೀರು ಬೆರಸಿದೆ' (ಅಥವಾ 'ಹಾಲು ಬೆರಸಿದೆ?') ಎಂಬ ಚೀಟಿಗಳನ್ನು ಕಟ್ಟಿಕೊಳ್ಳಬೇಕಾದೀತು. ಹೋಟಲಿನವರಂತೂ ಒಂದೊಂದು ತಿಂಡಿಗೆ ಒಂದೊಂದು ಲೇಬಲ್ ತಯಾರಿಸಿಯಾರು. ಉದಾಹರಣೆಗಾಗಿ ಮಸಾಲೆದೋಸೆ ಉದರವ್ಯಾಧಿಯ ಕುರಿತು ಎಚ್ಚರಿಕೆ ಚೀಟಿ ಧರಿಸಿರುತ್ತದೆ. ಆ ಚೀಟಿ ಸಾಕಷ್ಟು ದೊಡ್ಡದಾಗಿದ್ದರೆ ಭಕ್ತರು ಅದರಿಂದಲೇ ಕೈ ಒರೆಸಿಕೊಳ್ಳಲು ಅನುಕೂಲವಾಗುತ್ತದೆ. ಇನ್ನು ಕುರ್ಚಿ ಮಂಚಗಳೆಲ್ಲ ತಗಣೆಗಳಿವೆ ಎಂಬ ಚೀಟಿಯನ್ನೂ, ಮೋಟಾರು ರೈಲು ವಿಮಾನಗಳೆಲ್ಲ 'ಢಿಕ್ಕಿ ಹೊಡೆಯುತ್ತದೆ' 'ಉರುಳುತ್ತದೆ' 'ಉರಿದುಹೋಗುತ್ತದೆ' ಎಂಬ ದೊಡ್ಡಕ್ಷರಗಳ ಹಲಗೆಗಳನ್ನು ಹೊತ್ತಿರಬೇಕಾಗುತ್ತದೆ ಅಷ್ಟೇ ಅಲ್ಲ — 'ಪುಂಡರಿದ್ದಾರೆ' 'ಪುಢಾರಿಗಳಿದ್ದಾರೆ' 'ಲಂಚಕರಿದ್ದಾರೆ' 'ವಂಚಕರಿದ್ದಾರೆ' 'ಶಕುನಿಗಳಿದ್ದಾರೆ' ಎಂದು ಮುಂತಾಗಿ ಕಚೇರಿ, ಸ್ಕೂಲು, ಶಾಸನ ಸಭೆ, ಸಚಿವಾಲಯಗಳೇ ಮೊದಲಾದ ಸ್ಥಳಗಳಲ್ಲಿ ಬೋರ್ಡುಗಳನ್ನು ತೂಗಹಾಕಬೇಕಾದೀತು ನಮ್ಮ ದೇಶದ ಕುರಿತು 'ಗೇಟ್ ವೇ ಆಫ್ ಇಂಡಿಯ'ದಮೇಲೂ ಕೊನೆಗೆ ಯುನೈಟೆಡ್ ನೇಶನ್ಸ್ ಸಂಸ್ಥೆಯ ಬಾಗಿಲಲ್ಲಿಯೂ ಸೂಕ್ತ ಎಚ್ಚರಿಕೆಯುಳ್ಳ ಒಂದೊಂದು ಹಲಗೆ ಬೇಕಾಗಬಹುದು.

ಆದರೆ ಅಂಥ ಕಾಲ ಬಾರದೆಹೋಗಲಿ. ಏಕೆನ್ನುತ್ತೀರ? ನಾವು ನೀವು ಹಣೆಗೆ ಏನು ಚೀಟಿ ಹಚ್ಚಿಕೊಳ್ಳಬೇಕಾಗುತ್ತೋ ಯಾರಿಗೆ ಗೊತ್ತು! ದೊಂಗಲುನ್ನಾರು ಎಂಬ ಒಂದು ಬೋರ್ಡು ಕಂಡರೂ ನಗು ಬರುತ್ತೆ. ಇನ್ನು ಹಣೆ ಹಣೆಯಮೇಲೂ ....ಥೂ........ಎಣಿಸೋದಕ್ಕೆ ಅಸಾಧ್ಯ!

— ರಾಮಿ.

—o—

ತಗಣಿ

ಮೊದಲೊಳಿಲ್ಲೊ ಕಾಲಕಿರಿಯ ಬೆರಳ ಹಿಂದೆ ಚುಟುಚುಟು
ತೋಳು ಹೊಟ್ಟೆ, ಪಕ್ಕೆ, ಕಂಕುಳಲ್ಲಿ ಬಳಿಕ ಕುಟುಕುಟು
ಎರಡು ಕೈಯ ಹತ್ತು ಉಗುರು ಸಾಲದಕಟ ಕರಪರ
ಕಡಿತ ಹೋಗಿ ಬಂತು ಬೆಂಕಿ ಅಯ್ಯೋ ನಿದ್ದೆ ಹರಹರ ॥ ೧ ॥

ಆಳಲೆ ಇಲ್ಲ ಗಾಂಧಿ ಸತ್ತರೂನು, ನಾನು ಗಂಭೀರ
ಫೇಲಾದರೂ ಕಿಮಿಕೆನ್ನದೆ ಸಹಿಸಿದೆನೋ ಈ ಧೀರ
ಆಕಳಿಕೆಯ ಮಾಲೆಮಾಲೆ ಕಣ್ಣುತುಂಬಿ ನೀರ
ಮನಸೋತಿಗೆ ತನುಸೋತಿದೆ ಓ ರಾತ್ರಿಯೆ ಘೋರ ॥ ೨ ॥

ಬೊಗಸೆಯಲ್ಲಿ ಬಾಚುವಷ್ಟು ಹಾಸಿಗೆಯಲಿ ತಗಣಿ
ಗೋಡೆ ಮಾಡ ಹೋರು ಸೂರು ಕಿಕ್ಕಿರಿದಿವೆ ತಗಣಿ
ತೂರಿಬಂದು ಕಿಟಕಿಯಿಂದ ಹಾರಿಬಂದು ಗಾಳಿಯಲ್ಲಿ
ಏರಿಬಂದು ಅತಳದಿಂದ ಮುತ್ತುತಲಿವೆ ತಗಣಿ ॥ ೩ ॥

ಎರಡುನೂರು ನ.ಪೈ. ಕೊಟ್ಟು ಹೊಡೆಸಿದ ಡೀಡೀಟಿ
ಮೂರುನೂರು ತೆತ್ತುತಂದ ಫ್ಲಿಟ್ಟನೆಲ್ಲ ಕಟಪಿಟಿ
ಒಂದು ರಾತ್ರಿಯಲ್ಲೆ ಕೊಂದುಬಿಡುವೆನೆಂಬ ತಗುಣಿಪುಡಿ
ತಿಂದುಬಿಟ್ಟಿವಲ್ಲೊ ಉಂಡೆ ನಿದ್ದೆಯಾಶೆ ಹುಡಿಹುಡಿ ॥ ೪ ॥

ವರ್ಷದಾದಿಯಲ್ಲೆ ನಾನು ಘೋಷಿಸಿದ್ದೆ ಸಮರ
ಹೊಸವರ್ಷದ ಘೋಷಣೆ ಇದು : ತಗಣೀ ಕ್ವಿಟ್ ಕಮರ !
ಗೋಡೆಯ ಪಂಕ್ಚರನು ತಿದ್ದಿ ಸುಣ್ಣ ಬಣ್ಣ ಬರೆದು
ಫರ್ನೀಚರು ಫ್ಲೋಟೋಗಳಿಗೆ ಫೀನೈಲನು ಎರೆದು ॥ ೫ ॥

ಹೆಕ್ಸಡಾಲು, ಡಯಸಿನಾಲು, ಕಳ್ಳಿಯಾಲು ಸುರಿದು
ಹಾಸಿಗೆಯನು ತೊಳೆದು ಮೈಗೆ ಕ್ರಿಮಿನಾಶಕ ಎರೆದು
ಬುಡ್ಡಿ ಹಿಡಿದು ತಗಣಿ ತತ್ತಿಗಳನು ಪೂರ ಸುಟ್ಟು
ಕೋಣೆಗೆಂದು ಬಂದ ಜವಕೆ ಹೊರಗೇ ಮಣೆ ಇಟ್ಟು || ೬ ||

ಘನಘೋರದ ಸಮರದಂತ್ಯದಲ್ಲಿ ನನ್ನ ಪತನ
ಆಯಿತಯ್ಯೊ ! ಇನ್ನು ನಿದ್ದೆಯೆಲ್ಲಿ ? ರುದ್ರಕಥನ
ಹೊರಗೆ ಬಾನು ಬುವಿಯಮೇಲೆ ಸುರಿದಿದೆ ಕ್ರೂಡಾಯಿಲ್
ನಿದ್ದೆ ಇರದ ರಾತ್ರಿಯಲ್ಲಿ ಯಾರಿರ್ಪರೊಕಾಯಲ್ || ೭ ||

ಮನುಜಕುಲದ ಕೃತಕಚಂದ್ರ ಹಾರಿ ಏನುಬಂತು ?
ಅಪರಾಜಿತೊ ಐಸಿಬೀಎಂ ಏನನವಗೆ ತಂತು ?
ತರ್ಕತತ್ವಕಲೆಗಳೆಲ್ಲ ನಿದ್ದೆ ತಾರವೇಕೆ ?
ನಮ್ಮ ಅಟ್ಟಹಾಸವ್ಯರ್ಥ ತಗಣಿಕೊಲ್ಲದಿರ್ಪುದ್ಯಾಕೆ ? || ೮ ||

ಬುವಿಬಾನನು ಗೆಲಿದ ನರನ ಮುಖಕೆ ಎಸೆದು ಸಗಣಿ
ವಿಜಯಧ್ವಜವೆತ್ತಿ ಮೀಸೆ ತಿರುವಿ ನಗುವ ತಗಣಿ
ಕಡಿಯುತಿರುವತನಕ ಪ್ರಗತಿಯೆಂಬ ಮಾತುಮಿಥ್ಯ
ವಿಜ್ಞಾನಿಗಳೊಣಜಂಬದಲೇನೂ ಇಲ್ಲ ತಥ್ಯ || ೯ ||

ಇದ್ದರೇನು ಬಿಟ್ಟರೇನು ನನಗೆ ಬೇಕು ನಿದ್ದೆ
ಏನುಪಾಯವದಕೆ ? ಓಹೊ ಹೊಳೆಯಿತೀಗ ಗೆದ್ದೆ
ಕೋಣೆಗೀಗ ಸುರಿದು ಡಬ್ಬ ಸೀಮೆಎಣ್ಣೆ, ಹಚ್ಚಿ
ಬೆಂಕಿ, ಕೊಂದು ತಗಣಿ ಬಳಿಕ ಮಲಗುವೆ ಮನಸೇಚ್ಛೆ || ೧೦ ||

—ಅ. ರಾ ಸೇ.

ಯಾಕೆ ಹೇಳುಕ್ಕೆ ಬಂದೇಂದ್ರೇ....

ಯಾಕೆ ಹೇಳುಕ್ಕೆ ಬಂದೇಂದ್ರೆ ಮನ್ನೆ ನಮ್ಮ ಲಕ್ಷ್ಮೀನಾರಾಯಣಾಚ್ರ್ಯ್ರ ಮನೇಗೆ ಊಟಕ್ಕೆ ಹೋಗಿದ್ದೇ. ಗೊತ್ತಿದೆಯಲ್ಲಾ ವಿಮಲಮ್ಮನವ್ರ ಬಡಸಣಿಗೇ ....ಊಟಕ್ಕೆ ಕೂತವ್ರು ಊಟವಾದ ಮೇಲೇ ಬೇರೆಯವ್ರ ಸಹಾಯವಿಲ್ಲದೇ ಮೇಲಕ್ಕೆ ಏಳುವಂತೆಯೇ ಇಲ್ಲ...... ಸರಿ ನಮ್ಮ ಜತೆಗೇ ಸಹ ಪಂಗ್ತಿಲೀ ನಮ್ಮ ಕುಬೇರ ಸಾಹೇಬ್ರೂ ಸಹ..... ಅಂದಹಾಗೇ ನಮ್ಮ ಕುಬೇರ ಸಾಹೇಬ್ರಿಗೇ ವರ್ಗವಾಗಿಹೋದದ್ದು ನಿಮಗೇ ತಿಳಿದಿರಬೇಕಲ್ವೇ ? ಮನ್ನೆ ಶನಿವಾರ ಧಾರವಾಡಕ್ಕೆ ಹೊರಟ್ ಬಿಟ್ರಲ್ಲಾ ...... ಧಾರವಾಡಾಂತಂದ್ರೆ ಜ್ಞಾಪಕಕ್ಕೆ ಬರುತ್ತೇ ನಮ್ಮ ಕಮಲು ಗಂಡಾ .. ಅವನು ಇಂಟರ್‌ವ್ಯುಗೆ ದೆಹಲೀಗೇ ಹೋಗುಕ್ಕೇಂತ ನಾಳದ್ದು ಇಲ್ಲಿಗೆ ಬಂದು ಆಚೆನಾಳದ್ದು.... ಅದು ಸರೀ ನಿಮಗೆ ಯುಪಿ ಯುಸ್ಸಿಯಲ್ಲಿ ಯಾರೋ ಗುರ್ತು ಇದಾರೇಂತ ಹೇಳಿದ್ರಲ್ಲಾ ಯಾರದು ?..... .. ಶ್ರೀನಿವಾಸಯ್ಯರ್‍ರೇ ?........ ಏನೋಪ್ಪ ಹೆಸರುಗಳೇ ಮರೆತುಹೋಗುತ್ತೇ........ಯಾಕೆ ಹೇಳುಕ್ಕೆ ಬಂದೇಂದ್ರೆ ... ಮನ್ನೆ ಲಕ್ಷ್ಮೀನಾರಾಯಣಾಚ್ರ್ಯರ ಮನೇಗೇ ಊಟಕ್ಕೆ ಹೋಗಿದ್ದೇ........ಪುಷ್ಕಳವಾದ ಭೋಜನವಾದಮೇಲೇ ಹೀಗೇ ಕೂತಿದ್ವೀ ., ...ಅಂದಹಾಗೆ 'ಪುಷ್ಕಳ' ಅಂತ ಮಾತು ಬಂದಹಾಗೆಲ್ಲಾ ನನಗೆ ನಮ್ಮ ನೆತ್ತಿ ಶಠಗೋಪನ್ ಜ್ಞಾಪಕ ಬರ್ತಾನೆ. ನೋಡಿ ಮತ್ತೆ "ಪುಷ್ಕಳ" ಅಂತ ಅನ್ನಿಸುವ್ರದಕ್ಕೆ 3 ದಿನ ಅವನ ಜತೆಯಲ್ಲಿ ಹಗಲೂ ರಾತ್ರಿ ಸರ್ಕಸ್ ಮಾಡೀ ಮಾಡೀ... ....ಅಲ್ಲ 28ನೇ ತಾರೀಖು "ಕಮಲಾ ಸರ್ಕಸ್" ಬರುತ್ತಂತಲ್ರೀ ಈ ಊರಿಗೇ .. ಇವನಿಗೆ ಹೈದರಾಬಾದಿನಲ್ಲಿ ದುಡ್ಡು ಬಂದು ಸುರಿಮಳೇ ಆಯ್ತಂತ್ರೀ ಸುರಿಮಳೆಯೋ ಸುರಿಮಳೇರಿ... ....ಅಂದಹಾಗೇ ನಮ್ಮ ಊರುಕಡೇ ಮಳೇ ಬಿದ್ದು 3 ತಿಂಗಳಾಗಿ ಬೆಳೆಗಳೆಲ್ಲಾ ಒಣಗಿ ಹಾಳಾಯ್ತಂತೇರೀ.... ನಾಶ ...... ಎಲ್ಲಿ ... . ಒಂದು ಚಿಟಿಕಿ ನಶ್ಯ ಕೊಡೀ........ಯಾಕೆ ಹೇಳುಕ್ಕೆ ಬಂದೇಂದ್ರೇ....ಮನ್ನೇ ನಮ್ಮ ಲಕ್ಷ್ಮೀನಾರಾಯಣಾಚ್ರ್ಯರ ಮನೇಗೆ......

— ಶನಿ.

—o—

ಬೋರ್ ಜಾಡ್ಯ

ಬಲಿಪಾಡ್ಯಮಿ ದಿನ, .. ಹೊಳೆಯಿತು ನನಗೆ, ನಾನೊಬ್ಬ "ಮಹಾ ಬೋರ್" ಆಗುತ್ತಾ ಇದೇನೆ, ಎಂಬ ಭಯಂಕರ ಸತ್ಯಾಂಶ.

ಯಾರು ಯಾರೋ ಸ್ನೇಹಿತರು ಬಂದಿದ್ದರು. ಬೋಂಡ ತಿಂದು, ಕಾಫಿ ಕುಡಿದು, ಸಿಗರೇಟ್ ಹಚ್ಚಿದ್ದೆವು. ನನ್ನ ಹಳೇ ಗೆಳೆಯ, ಎಚ್ಚಮ್ಮನಾಯಕ "ಸಿನಿಮಾಗೆ ಹೋಗೋಣವೇನೋ ?" ಅಂದ. ಸುಮ್ಮನಿರಬಾರದಾಗಿತ್ತೆ, ನಾನು ? ಯಾವನಾದರೂ ಆ ಪ್ರಶ್ನೆಗೆ ಜವಾಬು ಹೇಳಲಿ, ಅಂತ ?........

ಕುರ್ಚಿಯಿಂದರ್ಧ ಎದ್ದು, ಹೊಗೆಯುಗುಳುತ್ತ, ಷುರುಮಾಡೇಬಿಟ್ಟೆ : "ನೋಡ್ರೋ ! ಸಿನಿಮ ಅಂದಾಗ, ಜ್ಞಾಪಕಕ್ಕೆ ಬರುತ್ತಾ ಇದೆ, ಮೊನ್ನೆ ಏನಾಯಿತು, ನಾನೂ ನನ್ನ ಹೆಂಡತಿಯೂ ಸಿನಿಮಾಗೆ ಹೋಗಿದ್ದಿವಿ. ನಡುವೆ ಒಂದುಸಲ ಹಾಳಾದವನು ದೀಪಗಳನ್ನೆಲ್ಲ ಒಟ್ಟಿಗೆ ಹಚ್ಚುತ್ತಾನಲ್ಲಾ, ಯಾರಿಗೂ ಅದರ ಸುಳಿವೇ ಕೊಡದೆ, ನಾವು ತಕ್ಕ ಎಚ್ಚರಿಗೆ ತೆಗೆದುಕೊಳ್ಳುವ ಮೊದಲೇ..... ..." ಅವಿಚ್ಛಿನ್ನವಾಗಿ ಹರಿಯಿತು, ನನ್ನ ಕಥಾವಾಹಿನಿ.

ಆಗ, ನನ್ನ ಕಡೆ ಕಣ್ಣುಹೊರಳಿಸಿದರು, ನನ್ನ ಎಡ ಬಲಗಳಲ್ಲಿ ಕುಳಿತಿದ್ದ ಇಬ್ಬರು ಸ್ನೇಹಿತರೂ ! ಆ ಹೊರಳಿಕೆಯಲ್ಲಿ ಕರುಣೆ ಭಯ ಜುಗುಪ್ಸೆ ಅಸಹ್ಯ ಪ್ರೀತಿ ಎಲ್ಲವೂ ಕಲಬರಕೆಯಾಗಿ ಕಂಡುಬಂತು.

ನಾನು ತಲೆತಗ್ಗಿಸಿದೆ. ಹೌದು ! ಇದೇ ಕಥೆಯನ್ನ ನಾನು ಆಗಲೇ, ಅದೇ ಗುಂಪಿಗೆ, ಆರೇಳುಸಲ ಹೇಳಿದ್ದೆ. ಆ ದಿನ ಸಂಜೆ, ಅರ್ಧ ಗಂಟೆ, ಮುಂಚೆ, ಅದನ್ನೇ ಹೇಳಿದ್ದೆ........

"ಅಯ್ಯೋ ! ನಾನೊಬ್ಬ ಬೋರ್," ಎಂದು ನನಗೆ ನಾನೇ ಕನಿಕರಿಸಿದೆ. ಇತರೆಯವರು ಹೀಗೆ ಒಂದೇ ಕತೆಯನ್ನಾಗಲಿ, ಒಂದೇ ಜಂಬವನ್ನಾಗಲಿ, ಪದೇ ಪದೇ ವಿವರಿಸುವಾಗ, ನಮಗೆ ಎಷ್ಟು ಅಸಹ್ಯವಾಗುತ್ತದೆ, ಎಂದು ನೆನೆದು, ನಾನು ಕುಗ್ಗಿದೆ.

"ಕ್ಷಮಿಸಿ,....ತಪ್ಪಾಯಿತು! ಇನ್ನು ಮೇಲೆ, ಕಥೇನ ಹೇಳುವ ಮೊದಲು, ನಿಮಗೆ ಆಗಲೇ ಅದನ್ನ ಹೇಳಾಯಿತೆ, ಎಂಬ ಪ್ರಶ್ನೆ ಹಾಕಿ, ಅನಂತರ ಪ್ರಾರಂಭಿಸುತ್ತೇನೆ...." ಎಂದು ಅವರೆದುರು ಅಂಗಲಾಚಿದೆ.

"ಅಷ್ಟು ಮಾಡು, ಮಹರಾಯ! ಕೆಟ್ಟುಹೋದ ರಿಕಾರ್ಡಿನಂತೆ, ನೀನು ಮತ್ತೆ ಮತ್ತೆ ಅದನ್ನೇ ಕಿವಿಗೆ ತುಂಬುತ್ತಾ ಇದ್ದರೆ,....ನಿನ್ನ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕಾದರೂ, ನಾವೂ ಕೂಡ ಬೋರುಗಳಾಗಬೇಕಾಗುತ್ತದೆ" ಎಂದರು, ಪಾಪ.

"ಛೆ! ಛೆ! ಅಂಥ ನರಕಕ್ಕೆ ನೀವೇಕೆ ಇಳಿಯಬೇಕು.. ನಾನೂ ಕೂಡ ಮತ್ತೊಂದು ಹೆಜ್ಜೆ ಇಡಲಾರೆ, ಆ ಪಾತಾಳದೊಳಕ್ಕೆ" ಎಂದೆ. "ಸಂಕಲ್ಪಮಾಡಿದ್ದನ್ನ ಸ್ಥಿರವಾಗಿ ನಡೆಯಿಸು, ಅಷ್ಟೇ ಸಾಕು", ಅಂದರವರು.

"ಅನುಮಾನವೇಕೆ? ಮೊನ್ನೆ ಸಿನಿಮಾಗೆ ಹೋಗಿದ್ದೆವಲ್ಲಾ....ನಾನೂ ನನ್ನ ಹೆಂಡತಿಯೂ........ಓ! ಮರೆತೆ! ನಿಮಗೆ ಆಗಲೇ ಅದನ್ನ ಹೇಳಾಯಿತೇನು?" ಎಂದು ಸಂಕಲ್ಪದಂತೆ, ಕೇಳಿದೆ.

"ಆಯಿತಲ್ಲೋ! ಮಧ್ಯೆ, ಅಕಸ್ಮಾತ್ತಾಗಿ", ಎಂದರವರು.

"ಮಧ್ಯೆ, ಅಕಸ್ಮಾತ್ತಾಗಿ, ಅಲ್ಲ...ಹಾಗಾದರಿದು ಬೇರೆ, ಕೇಳಿ........ಮೊನ್ನೆ ಏನಾಯಿತು? ನಾನೂ ನನ್ನ ಹೆಂಡತಿಯೂ ಸಿನಿಮಾಗೆ ಹೋಗಿದ್ದಿವಿ. ನಡುವೆ ಒಂದುಸಲ ಹಾಳಾದವನು ದೀಪಗಳನ್ನೆಲ್ಲ ಒಟ್ಟಿಗೆ ಹಚ್ಚುತ್ತಾನಲ್ಲಾ, ಯಾರಿಗೂ ಅದರ ಸುಳಿವೇ ಕೊಡದೆ ನಾವು ತಕ್ಕ ಎಚ್ಚರಿಕೆ ತೆಗೆದುಕೊಳ್ಳುವ ಮೊದಲೇ...." ಅವಿಚ್ಛಿನ್ನವಾಗಿ ಹರಿಯಿತು, ನನ್ನ ಬೋರ್‌ವಾಹಿನಿ.

ಬಹಳ ಸಂಕಟವಾಯಿತು, ನನಗೆ....ನೆಲದತನಕ, ಕುಗ್ಗಿದೆ. ಇನ್ನು ನಾನು ಏನುತಾನೆ ಮಾಡಲಿ? ತಿಳಿಯದಾಗಿದೆ.

— ಕಾಮತ್.

— o —

ಕನ್ನಡ ಕಾಬೂಲಿವಾಲಾ

(ಒಂದು ವರದಿ ವಿಶೇಷ)

ಖ್ಯಾತ ಡೈರೆಕ್ಟರ್ ಗುಂಡಣ್ಣನವರನ್ನು "ಚಿತ್ರ ಸ್ವರ್ಗ" ಪ್ರತಿನಿಧಿ ಭೇಟಿಮಾಡಿದಾಗ, ಅವರ ಮುಖ ವರ್ಣನಾತೀತವಾಗಿತ್ತು. ಬಬ್ಬೂರುಕಮ್ಮೆಗಳ ಹುಳಿಗೊಜ್ಜು ತಿಂದ ಬಡಗನಾಡಿನವರ ಮುಖ ಹೇಗಿರಬಹುದೋ ಹಾಗಿತ್ತು. ಗುಂಡಣ್ಣನವರು ಬಬ್ಬೂರುಕಮ್ಮೆಗಳೆನ್ನುವುದೂ ನಿಜ. ಅವರು ಆ ದಿನ ಹುಳಿಗೊಜ್ಜು ತಿಂದದ್ದೂ ನಿಜ. ಆದರೆ ಆ ದಿನ, ಊಟಕ್ಕೆ ಎಳೆಹುಣಿಸೆಕಾಯಿ ನೆಂಜಿಕೊಂಡಿದ್ದರು ಅವರು. ಹುಳಿಗೆ ಹೆದರುವ ಘಟವಲ್ಲ ಅವರದು. ಆದರೂ ಅವರ ಮುಖ ಕಾರ್ಕೋಟಕ ಹುಳಿ ತಿಂದವರಂತಿತ್ತು. ಕಾರಣಕ್ಕಾಗಿ ಹುಡುಕಾಡುವ ಕಷ್ಟವೇ "ಚಿತ್ರಸ್ವರ್ಗ" ಪ್ರತಿನಿಧಿಗೆ ಬರಲಿಲ್ಲ. ಏಕೆಂದರೆ ಗುಂಡಣ್ಣನವರ ಕೈಯಲ್ಲಿ ಕಾಬೂಲ್ ದ್ರಾಕ್ಷಿ ಗೊಂಚಲೊಂದಿತ್ತು. ಅವರ ಕಣ್ಣುಗುಡ್ಡೆ ಬೆಳ್ಳಗಾಗಿದ್ದುವು. ಕೆಲಹೊತ್ತಿನ ನಂತರ ಗುಂಡಣ್ಣನವರು ಹುಳಿ ಸ್ವರ್ಗದಿಂದ ಕೆಳಗಿಳಿದರು. ತಕ್ಷಣವೇ ಭಾಷಣಕ್ಕಾರಂಭಿಸಿದರು. ಅವರಿಗೆ ಬ್ರೈನ್ ವೇವ್ ಬಂದಿತ್ತು.

"ಪ್ರಪಂಚದ ಅಗ್ರಗಣ್ಯ ಸ್ಟುಡಿಯೋ ಹಾಲಿವುಡ್ಡಿನಲ್ಲಿಲ್ಲ, ಜಪಾನಿನಲ್ಲಿಲ್ಲ, ಪೈನ್‌ವುಡ್ಡಿನಲ್ಲಿಲ್ಲ, ಟಾಲಿಗಂಜಿನಲ್ಲಿಲ್ಲ, ಬೊಂಬಾಯಿನಲ್ಲೂ ಇಲ್ಲ. ಅದು ಇದೇ. ಇಲ್ಲೇ ಮುಗಿಲುಹಳ್ಳಿಯಲ್ಲೇ ಇದೆ. ಅದರ ಹೆಸರು ಜಾಲಿಕಾವಲು.

ಸತ್ಯಜಿತ್‌ರಾಯ್, ತಪನ್‌ಸಿನ್ಹಾ, ಬಿಮಲ್‌ರಾಯ್, ಶಾಂತಾರಾಂ ಇವರೆಲ್ಲ ಹಿಂದೆಬಿದ್ದರೆಂದೇ ಭಾವಿಸಿ.

ಮದರಾಸಿನ ಡಬ್ಬಿಂಗ್ ನಿಪುಣರಿಗೆ, ಇನ್ನು ಬಹುಕಾಲ ಡಬ್ಬು ಸಿಕ್ಕಲಾರದು.

ಮುಂದಿನ ವರ್ಷದ ಸರ್ವೇ ಸಮಸ್ತ ರಾಷ್ಟ್ರೀಯ ಹಾಗೂ ಅಂತರ್ರಾಷ್ಟ್ರೀಯ ಸಿನಿಮಾ ಪ್ರಶಸ್ತಿಗಳೂ ನಮಗೇ, ಕನ್ನಡಿಗರಿಗೇ. ಹೀಗೆನ್ನದ ಹೆರವರು ಅವರಿದ್ದರು ಒಂದೇ ಇರದಿದ್ದರು ಒಂದೇ."

ಚಿತ್ರಸ್ವರ್ಗ ಪ್ರತಿನಿಧಿ ಬೆಪ್ಪಾದ. ಗಂಟಲು ಸರಿಮಾಡಿಕೊಂಡ.

"ಸ್ವಾಮಿ, ಸತ್ಯಜಿತ್‌ರಾಯ್ ಎಂದರೆ ಏನೆಂದು ತಿಳಿದಿದೀರಿ. ಅವನ ಅಪರಾಜಿತಾಕ್ಕೆ ದೊರೆತ ಯಶ, ನಿಮಗೆ ?.... ...ರಂಗನ ಮುಂದೆ ಸಿಂಗನೇ ?"

ಗುಂಡಣ್ಣ—ಯಾರು ರಂಗ ? ಯಾರು ಸಿಂಗ ?

ಚಿತ್ರಸ್ವರ್ಗ ಪ್ರತಿನಿಧಿ—ನಿಮ್ಮ ಮಾತಿಗೆ ಅಳಲೋ ನಗಲೋ ?

ಗುಂಡಣ್ಣ—ಏನಾದರೂ ಮಾಡಿ. ಆದರೆ ನನ್ನ ಮುಂದಿನ ಚಿತ್ರ ನೋಡಲು ಮರೆಯದಿರಿ. ಅತಿಶ್ರೇಷ್ಠ ಚಿತ್ರವದು. ನಭೂತೋ ನಭವಿಷ್ಯತಿ.

ಚಿತ್ರಸ್ವರ್ಗ ಪ್ರತಿನಿಧಿ—ಯಾವುದದು ?

ಗುಂಡಣ್ಣ—ಕಾಬೂಲಿವಾಲಾ !

ಚಿತ್ರಸ್ವರ್ಗ ಪ್ರತಿನಿಧಿ—ನಿಮಗೆ ಇಂಥ (ಸ್ವಗತ-ದುರ್) ಬುದ್ಧಿ ಹೇಗೆ ಬಂತು. ಏಕೆ ಬಂತು. ಬಂತಾದರೂ ಏಕೆ ?

ಗುಂಡಣ್ಣ—ಬರಬಾರದೇಕೆ ?

ಚಿತ್ರಸ್ವರ್ಗ ಪ್ರತಿನಿಧಿ—ನಾಯಕನ ಪಾತ್ರಕ್ಕೆ ಯಾರನ್ನಾರಿಸುತ್ತೀರಿ.

ಗುಂಡಣ್ಣ—ದಿಲೀಪ್‌ಕುಮಾರ್ ಅಥವಾ ಮನೋಜ್‌ಕುಮಾರ್.

ಚಿತ್ರಸ್ವರ್ಗ ಪ್ರತಿನಿಧಿ—ಮಿನಿಯ ಪಾತ್ರಕ್ಕೆ ?

ಗುಂಡಣ್ಣ—ಮೀನಾಕುಮಾರಿ, ಸುಚಿತ್ರಾಸೇನ್, ನೂತನ್ ಅಥವಾ ರತೀ ದೇವಿ.

ಚಿತ್ರಸ್ವರ್ಗ ಪ್ರತಿನಿಧಿ—ಓಹೋ ! ಸರಿ. ಕನ್ನಡ ಕಾಬೂಲಿವಾಲಾದ ಬಗ್ಗೆ ಇನ್ನಷ್ಟು ವಿವರ ಕೊಡಿ.

ಗುಂಡಣ್ಣ—ಕತೆ ಚಿತ್ರದ ಜೀವಾಳ. ಹಾಡುಗಳು ಜೀವನಾಡಿ. ಸೆಕ್ಸ್ ಅಪೀಲ್ ಹೃದಯ. ಉದ್ದ ಆಧಾರಸ್ಥಂಭ. ಬಂಗಾಳಿ ಕಾಬೂಲಿವಾಲಾಕ್ಕೆ ರಾಷ್ಟ್ರಪ್ರಶಸ್ತಿ ದೊರೆತಿರಬಹುದು. ಆದರೆ ನನ್ನ ಕನ್ನಡ ಕಾಬೂಲಿವಾಲಾದ ಹೃದಯಂಗಮ ಕತೆ, ಅತಿ ನೂತನ ನೃತ್ಯ, ಚೇತೋಹಾರಿ ಗೀತೆಗಳು ಮೇಲಾಗಿ ಅದರ ಉದ್ದ ಇವುಗಳಿಂದ ಅಂತರ್‍ರಾಷ್ಟ್ರೀಯ ಪ್ರಶಸ್ತಿಗಳು ಡರ್ಜಗಟ್ಟಲೆ ಉದುರು ವುದಲ್ಲದೆ, ದುಡ್ಡೂ ಕೂಡ ಮಳೆಯಂತೆ ಸುರಿಯುತ್ತದೆ. ತಮಿಳುನಾಡಿನಲ್ಲೇ ನಾಲ್ಕಾರು ಕೋಟಿ ಸಿಕ್ಕುತ್ತದೆ. ರವೀಂದ್ರರ ಕತೆಗಿಂತ ನಮ್ಮ ಕತೆ ಸಿನಿಮಾಕ್ಕೆ ಹೆಚ್ಚು ಒಗ್ಗುತ್ತದೆ.

ಚಿತ್ರಸ್ವರ್ಗ ಪ್ರತಿನಿಧಿ—ಹಾಗಾದರೆ ರವೀಂದ್ರರ ಕತೆಗಿಂತ........

ಗುಂಡಣ್ಣ—ರವೀಂದ್ರರಿಗೆ ಸಿನಿಮಾ ಕತೆಯೇನು ಗೊತ್ತು ? ನಾನು ಹೇಳು ವುದನ್ನು ಕೇಳಿ. ಮಧ್ಯೆ ಇಲ್ಲಸಲ್ಲದ ಆಕ್ಷೇಪಣೆ ತೆಗೆಯಬೇಡಿ ರಹಮತ್‌ಗೆ

ವಯಸ್ಸು 24. ಮಿನಿಗೆ 18. ಒಂದು ದಿನ ಮಿನಿಯ ಕಣ್ಣುಗಳು ರಹಮತನ ಕಣ್ಣುಗಳನ್ನು ಸಂಧಿಸಿದಾಗ....

ಚಿತ್ರಸ್ವರ್ಗ ಪ್ರತಿನಿಧಿ—ಮೊಹಬ್ಬತ್ ಉರ್ಫ್ ಅನುರಾಗ ಉದ್ಭವಿಸಿತು.

ಗುಂಡಣ್ಣ—ಹೂಂ. ಹಣ್ಣು ಕೊಳ್ಳುವ ನೆವದಿಂದ ಅವನನ್ನು ಕರೆದು ಅವನಿಗೆ ರಸಗುಲ್ಲಾ ಕೊಟ್ಟಳು. ಅಂದಿನಿಂದ ಅದೇ ರೂಢಿ ಬೆಳೆಯಿತು. ಅನುರಾಗ ದೃಢಗೊಂಡಿತು. ಹೀಗಿರುವಾಗ ರಹಮತನ ಅರೆಸ್ಟ್ ಆಯ್ತು. ದುಷ್ಟ ಮಂತ್ರಿಯ ಒಳಸಂಚಿನಿಂದ........

ಚಿತ್ರಸ್ವರ್ಗ ಪ್ರತಿನಿಧಿ—ಅರೇರೆ....ಯಾವ ಮಂತ್ರಿ ? ರವೀಂದ್ರರ ಕತೆಯಲ್ಲಿ ಈ ಸುದ್ದಿಯೇ ಇಲ್ಲವಲ್ಲ.

ಗುಂಡಣ್ಣ—ರವೀಂದ್ರರೇನು ಬಲ್ಲರು ? ನೀವೇನು ಬಲ್ಲಿರಿ ? ರಹಮತ್ ಸುಲ್ತಾನನ ಮಗ. ಸುಲ್ತಾನನ ಮಂತ್ರಿ, ಸುಲ್ತಾನನನ್ನು ಕೊಂದು ತಾನೇ ಪಟ್ಟವೇರಿದ್ದ. ರಹಮತ್ ಭಾರತಕ್ಕೋಡಿಬಂದು ಹಣ್ಣುಮಾರುವವನ ವೇಷ ಧರಿಸಿದ್ದ. ಮಂತ್ರಿ ಅಷ್ಟಕ್ಕೇ ಬಿಡದೆ ಒಳಸಂಚುಮಾಡಿ ರಹಮತನನ್ನು ಜೈಲಿಗಟ್ಟಿದ.

ಇತ್ತ ಮಿನಿಯ ತಂದೆತಾಯಿಗಳು ಬಲೋದ್ಬಂಧದಿಂದ ಅವಳ ಮದುವೆ ಏರ್ಪಡಿಸಿದರು.

ರಹಮತ್ ಜೈಲಿನಿಂದ ತಪ್ಪಿಸಿಕೊಂಡು ತನ್ನ ದೇಶಕ್ಕೆ ಹೋಗಿ ಬಂಡೆಬ್ಬಿಸಿ ಮಂತ್ರಿಯನ್ನು ಯುದ್ಧದಲ್ಲಿ ಕೊಂದು ತಾನೇ ಸುಲ್ತಾನನಾದ. ಮಿನಿಯ ಮನೆಗೆ ಬಂದ. ಇನ್ನೇನು ಅವಳ ಕತ್ತಿಗೆ ತಾಳಿ ಬೀಳಬೇಕು ಅಷ್ಟುಹೊತ್ತಿಗೆ ಘಟಿಸಿದ ಆ ಮದುವೆ ನಿಂತು ಈ ಮದುವೆ ಆಯ್ತು.

ಚಿತ್ರಸ್ವರ್ಗ ಪ್ರತಿನಿಧಿ—ಈ ಕತೆಯಿಂದ ಬಂಗಾಳಿಗಳೂ ಆಫ್ಘನರೂ ರೇಗ ಬಹುದಲ್ಲವೇ ?

ಗುಂಡಣ್ಣ—ಕತೆ ರವೀಂದ್ರರದೆಂದೂ, ರಹಮತ್ ಆಫ್ಘಾನಿಸ್ಥಾನದವನೆಂದೂ ತಿಳಿಸುವುದೇ ಇಲ್ಲ. ಕತೆ–ಹುಸೇನಬೀ ಪ್ರಿಯರಿಂದ. ರಹಮತನದು ಒಂದು ದೇಶ ಅಷ್ಟೇ ಹೆಸರಿಲ್ಲ ಕೂನಿಲ್ಲ. ಚಿತ್ರದ ಹೆಸರು 'ಕಾಬೂಲಿವಾಲಾ'. ಡೈರೆಕ್ಟರ್ ನಾನು.

ಚಿತ್ರಸ್ವರ್ಗ ಪ್ರತಿನಿಧಿ—ಹಾಗಾದರೆ 'ಕಾಬೂಲವಾಲಾ ಎಂದು ಹೆಸರೇಕೆ ಇಡುತ್ತೀರಿ ?

ಗುಂಡಣ್ಣ—ಇಲ್ಲೇ ಮುಗಿಲುಹಳ್ಳಿಯ ಚರಂಡಿ ನೀರಿನಲ್ಲೇ ಬೆಳೆದ ಈ ಹಣ್ಣು ಗಳಿಗೆ ಕಾಬೂಲ್‌ದ್ರಾಕ್ಷಿ ಎಂದೇಕೆ ಹೆಸರಿಟ್ಟರು ? (ಮುಂದುವರಿಯುತ್ತಾ) ಈ ಚಿತ್ರ ದಲ್ಲಿ ಆರೆಂಟು Rock'n Roll ನೃತ್ಯಗಳು ಇರುತ್ತವೆ. ಕೋರಿಯೋಗ್ರಾಫರ್ ನೃತ್ಯಶಾರ್ದೂಲ ಭೈರವನ್ ಇದಕ್ಕಾಗಿ ವಿಲಿಯಂಪ್ರೆಸ್ಲಿ ಬಳಿ ಸಮಾಲೋಚನೆಗೆ

ಹೋಗಿದ್ದಾರೆ. ಜಾಕ್ ಕಾರ್ಡಿಫ್‌ಗೆ ಫೋಟೋಗ್ರಫಿ ಕಲಿಸಿದ ಶ್ರೀ ಹುಚ್ಚಲಿಂಗಯ್ಯ ಹಕ್ಕಾಪಕ್ಕಿ ಇವರದೇ ಛಾಯಾಗ್ರಹಣ. ಯುದ್ಧ ದೃಶ್ಯಗಳ ಚಿತ್ರೀಕರಣಕ್ಕಾಗಿ ಕಿಂಗ್‌ವಿಡರ್‌ರವರೇ ಬರಲಿದ್ದಾರೆ. ಅವರ ಜೊತೆಗೆ ನಮ್ಮ ಸ್ಟಂಟ್ ಮಧುಸೂಧನ್ ಕೆಲಸಮಾಡುವರು. ಎಡಿಟಿಂಗ್ ಆಲೋಚನೆಯನ್ನು ಮಾಡಿಲ್ಲ.

ಚಿತ್ರಸ್ವರ್ಗ ಪ್ರತಿನಿಧಿ—ಸಂಗೀತ ?

ಗುಂಡಣ್ಣ—**ಹೆಂಗೈತೆ ನೋಡೊ ಮಗನೇ.**

ಚಿತ್ರಸ್ವರ್ಗದ ಪ್ರತಿನಿಧಿಯ ರಕ್ತ ಕುದಿಯಿತು. ಅವನು ಗುಂಡಣ್ಣನವರ ಕಾಲರ್ ಹಿಡಿದ. ಇನ್ನೇನು ತೆಪರಾಕಿ ತಟ್ಟಲಿದ್ದ ...

ಗುಂಡಣ್ಣ—**ಹೆಂಗೈತೆ ನೋಡೊ ಗಾಳಿ**
ಐದೀನಿ ಜೊತೆಗೆ ಹುಡುಗಿ
ನಿನ್-ತಲೆಯೊಾಗೆ ಜ್ಞಾನ ಮಡುಗೀ
ಹೆಂಗೈತೆ ನೋಡೆ ಹುಡುಗಿ
ಹೆಂಗೈತೆ ನೋಡೆ ಗಾಳಿ
ಐದೀನಿ ಜೊತೆಗೆ ನಾನು
ನಿನ್-ತಲೆಯೊಾಗೆ ಮೂರು ಹೇನು
ಹೆಂಗೈತೆ ನೋಡೆ ಹುಡುಗಿ.

ಚಿತ್ರಸ್ವರ್ಗ ಪ್ರತಿನಿಧಿ ಈ ಗಾನವನ್ನು ಕೇಳಿ ಥಂಡಾಹೊಡೆದ. ಹಣೆ ಹಣೆ ಚಚ್ಚಿಕೊಂಡ. ಬಾಯಿ ಬಡಿದುಕೊಂಡ.

ಗುಂಡಣ್ಣ—(ಚಿತ್ರಸ್ವರ್ಗ ಪ್ರತಿನಿಧಿಯನ್ನು ಸಂತೈಸುತ್ತಾ) ಈ ಡೈಲಾಗ್ ಹಾಡು ನನ್ನ ಬಾಯಲ್ಲಿ ಅಸಹನೀಯವಾಗಿ ಹೊರಟುದೇನ್ನೋ ನಿಜ. ಆದರೆ ಚಿತ್ರದಲ್ಲಿ ಕೇಳಿನೋಡಿ. ಆಗ ತಿಳಿಯುತ್ತದೆ. ಹುಸೇನಬೀಪ್ರಿಯರ ಜೀವಂತ ಭಾವ, ಗಾನಬ್ರಹ್ಮ ತುಂಬುರಪುತ್ರರ ಸಂಗೀತಗಳು ನವನವೋನ್ಮೇಷಶಾಲಿಯಾಗಿ ನಿಮ್ಮನ್ನು ಸುಸ್ತುಮಾಡಲಿವೆ. ಚಿತ್ರರಂಗದಲ್ಲಿ ಅದ್ಭುತ ಕ್ರಾಂತಿಯಾಗಲಿದೆ. 'ಕಾಬೂಲಿವಾಲಾ' ಚಿತ್ರ ಈ ಕ್ರಾಂತಿಯ ಲೆನಿನ್. ಅದನ್ನು ಕಂಡು ನಿಮ್ಮ ಮನ ಪ್ರಫುಲ್ಲವಾಗಲಿದೆ. ಕಿವಿ ಸವಿಯಲಿವೆ, ಕಣ್ಣು ಅರಳಿವೆ. ಅದಕ್ಕಾಗಿ ಜನತೆಯ ಜೇಬು ಬರಿದಾಗಲಿವೆ. ಕಾಲು ಕುಣಿಯಲಿವೆ... .....

ಚಿತ್ರಸ್ವರ್ಗದ ಪ್ರತಿನಿಧಿ—ಹೃದಯ ಸ್ತಂಭಿಸಲಿವೆ. ಎಂದೂ ಯಾರೂ ಎಲ್ಲೂ ಇಂಥ ಚಿತ್ರವನ್ನು ಕಂಡಿರಲಾರರು, ಕಾಣಲಾರರು.

ಗುಂಡಣ್ಣ—ರವೀಂದ್ರರ ....

ಚಿತ್ರಸ್ವರ್ಗ ಪ್ರತಿನಿಧಿ—ಆತ್ಮಕ್ಕೆ ಶಾಂತಿ ಸಿಗಲಿ.

— ಅ. ರಾ. ಸೇ.

ಚಿತ್ತ-ಶುದ್ಧಿ


ಎನ್ನ ಚಿತ್ತದಿ ಗೂಡು ಮೂಡಿದೆ
ಕತ್ತಲಲ್ಲೇ ಬಾವಲಿ!
ಎನ್ನ ಹೃದಯದಿ ಎಕ್ಕ ಹುಟ್ಟಿದೆ
ತಲೆಯ ಬುರುಡೆಗು ಹಬ್ಬಿದೆ!
ನೆನಪು ನಂದನ ತುಂಬ ಶೀಗೆಯ
ಮೆಳೆಯು ಬೆಳೆದಿದೆ ಎತ್ತರ!
ಮನದ ಮನೆಯೇ ಕುಸಿದು ವಾಲಿದೆ
ಕಂಬವೆರಡಕೆ ಕುಂಟಿದೆ!
ಮೂಲೆ ಮೂಲೆಯಿ ಗೋಳು ನಾದವೆ
ಗಾಳಿ ತೂರಲು ಬರುತಿದೆ!
ಧೂಳು ಹರಡಿದೆ, ಜೇಡ ರಚಿಸಿದೆ
ತಲೆಯ ಮೇಗಡೆ, ಚಪ್ಪರ!
ಎಂದೂ ತಿಂದಾಃ ಕಡಲೆ, ಬಾಳೆಯ
ಸಿಪ್ಪೆ ನೆಲದಲಿ ಬಿದ್ದಿದೆ!
ಸಾಲಗಾರರ ಸಾಲು ಚಿತ್ರಗ–
ಳಳುವ ದನಿಯೇ ಬರುತಿದೆ
ಸತ್ತ ಕನಸನು ಸುಪ್ತ ಚೇತನ
ಮತ್ತೆ ಮನಸಿಗೆ ತರುತಿದೆ

—(ಆದರೆ)—

'ಮಡದಿ' ಎನಿಪಾ ಮಹಿಳೆ ಒಬ್ಬಳು
ಎನ್ನ ಮನೆಯನು ಹೊಕ್ಕರೆ
ಅವಳ ಹಲ್ಲಿನ ಹೊಳಪ ಕಂಡರೆ
ಓಟ! ಆಗಲೆ, ಬಾವಲಿ!
ರೇಗಿ ಶಪಿಸಲು ಅವಳು ಹದಿಬದೆ
ಶೀಗೆ ಬೇರಿಗೆ ಗೆದ್ದಲು!

ಕಿಡಿಯ ಹಾರಿಸೆ ಭದ್ರಕಾಳೀ
ಎಕ್ಕ ವಲ್ಲೀ ಭಸ್ಮವು!
ಧೂಳು ಜೇಡರ ಬಲೆಯು ಸಿಪ್ಪೆ
ಪೊರಕೆಗಲ್ಲೀ ವಾಯುವು!
ಸತ್ತ ಕನಸಿಗೆ ಮತ್ತೆ ಹೇಗೋ
ಜೀವ ಚೇತನವೀವಳು!
ಗೋಳುನಾದವೆ ಗಾನವಾಗಿ
ನಾಡಿನಾಡಿಲಿ ಮಿಡಿವುದು!
ದಂಪತಿಗಳೆಮಗೆ ಮನೆಯಾ
ಸೊಟ್ಟಕಂಭವು ನೆಟ್ಟಗೆ!
ಇಂಪು ತಂಪು ಸೊಂಪು ಎಲ್ಲವು
ಗುಂಪು ಕಟ್ಟುವುವೊಟ್ಟಿಗೆ!!

— ನಾ ಕ.



ಇನ್ನುಮೇಲೆ ಹೆಂಗಸರೂ ಪೋಲೀಸಿಗೆ ಸೇರುತ್ತಾರಂತೆ-ಆದ್ದರಿಂದ ಮೀಶೆ ಬೆಳೆಸಲೇಬೇಕು!

ಲಾಲಿನಿ

"ನಮಸ್ಕಾರ! ಭಾರತ ಚಿತ್ರಪ್ರಪಂಚದಲ್ಲಿ ಕೀರ್ತಿಗಳಿಸಿರುವ ತಮ್ಮ ಹತ್ತಿರಕ್ಕೆ ಈ ಸಂದರ್ಶನದ ನೆಪದಲ್ಲಿ ನಾನು ಬಂದಿರುವುದು, ನಮ್ಮ "ಲಾಲಿನಿ" ಸಾಬೂನನ್ನು ಕುರಿತು ಮಾತನಾಡುವುದಕ್ಕೆ."

"ಹುಂ."

"ಲಾಲಿನಿ ಸಾಬೂನಿನ ಪರಿಶುಭ್ರವಾದ ನೊರೆಯ ಪರಿಮಳ ಸ್ವರ್ಗೀಯ ಸುಖವನ್ನು ಕೊಡುತ್ತದೆ, ಎಂದು ಧಾರಾಳವಾಗಿ ಹೇಳಬಹುದಲ್ಲವೆ?"

"ಹುಂ."

"ಚಲನಚಿತ್ರದ ತಯಾರಿಕೆಯಲ್ಲಿ ಆ ಕೃತಕ ದೀಪಜ್ಯೋತಿಯಿಂದ ಅರೆಬೆಂದ ಚರ್ಮಕ್ಕೆ ಆಹ್ಲಾದಕಾರಕವಾದ ಒಂದು ಸಾಬೂನು ಅತ್ಯಾವಶ್ಯಕವೆಂಬುದನ್ನೂ ಲಾಲಿನಿ ಸಾಬೂನು ಒಂದು ಸಾಬೂನೆಂಬುದನ್ನೂ ನಾವು ಒಪ್ಪಲೇ ಬೇಕಲ್ಲವೆ?"

"ಹುಂ."

"ಲಾಲಿನಿ ಸಾಬೂನನ್ನು ಪಯೋಗಿಸುತ್ತಾ ಬೇಸಿಗೆಯಲ್ಲಿ ತಣ್ಣೀರಲ್ಲೂ, ಚಳಿಗಾಲದಲ್ಲಿ ಬಿಸಿನೀರಲ್ಲೂ ಸ್ನಾನಮಾಡಬಹುದಲ್ಲವೇ?"

"ಹುಂ."

"ಲಾಲಿನಿ ಸಾಬೂನನ್ನೇ ನೀವೂ ನಿಮಗೆ ಪರಿಚಿತರಾಗಿರುವ ನೂರಾರು ರಜತ ತಾರೆಯರೂ ಅನುದಿನವೂ ಮುಖಮಾರ್ಜನಕ್ಕಾಗಿ ಉಪಯೋಗಿಸುತ್ತಿರುವರಲ್ಲವೆ? ಅದರಿಂದಲೇತಾನೆ ಅವರೆಲ್ಲರೂ ಭಾರತದ ಯುವಜನಸ್ತೋಮದ ಕಣ್ಮಣಿಗಳಾಗಿ, ಕರ್ಣಾಭರಣಗಳಾಗಿ, ಅವರ ಸಂಪತ್ತಿದಾನಕ್ಕೂ ಬುದ್ಧಿದಾನಕ್ಕೂ ಪಾತ್ರರಾಗಿರುವುದು?"

"ಹುಂ."

"ಮಾನವ ಚರ್ಮದ ಹೊರ ಪದರವೊಂದನ್ನೇ ಅಲ್ಲದೆ, ಅದರ ಕೆಳಗಿನ ಎರಡು ತೆಳುಪದರಗಳನ್ನೂ ಲಾಲಿನಿ ಸಾಬೂನಿನ ಪ್ರಭಾವಪೂರಿತ ಶ್ವೇತತಮ ಫೇನಾವಳಿ ಶುದ್ಧೀಕರಿಸುತ್ತದೆ, ಎಂದು ನಾವು ಹೇಳಬಹುದಲ್ಲವೆ?"

"ಹುಂ."

“ತುಂಬಾ ವಂದನೆಗಳು! ಲಾಲಿನಿ ಸಾಬೂನನ್ನು ಕುರಿತ ನಿಮ್ಮ ಅಮೂಲ್ಯ ಅಭಿಪ್ರಾಯಗಳಿಗಾಗಿ ತುಂಬಾ ಅಭಾರಿಯಾಗಿದೇನೆ ...ಇವನ್ನೆಲ್ಲ ಪ್ರಸಿದ್ಧಿಪಡಿಸಲು ತಮ್ಮ ಅನುಮತಿಯನ್ನು ಬೇಡುತ್ತೇನೆ.......ನಮ್ಮ ಸಂಭಾಷಣೆಯನ್ನೆಲ್ಲ ಇಗೋ ಈ ಪತ್ರದಲ್ಲಿ ಬರೆದಿದೇನೆ. ರುಜು ಹಾಕಿ, ದಯವಿಟ್ಟು. ನಿಮಗೆ ಇಗೋ, ಈ ಚೆಕ್ಕು!....ನಾಳೆಯೇ ನಿಮಗೆ ಲಾಲಿನಿ ಸಾಬೂನನ್ನು ಒಂದು ಡಜನ್ ಕಳುಹಿಸಿ ಕೊಡುತ್ತೇವೆ ...ನೀವು ಇದುವರೆಗೂ ಅದನ್ನ ನೋಡಿರಲಾರಿರಿ.”

“ಇಲ್ಲ.”

“ಚಿಂತೆ ಇಲ್ಲ! ಅದನ್ನ ನೀವು ಉಪಯೋಗಿಸಬೇಕೆಂಬ ನಿರ್ಬಂಧವೂ ಇಲ್ಲ”

“ಗೊತ್ತು, ಗೊತ್ತು.”

— ಪಾರ್ಥಸಾರಧಿ.

— o —



ಭಾವ ಬರ್ತಾನೆ ಕಣೋ, ಪಟಾಕಿ ತರ್ತಾನೆ ಕಣೋ, ಅಳದೆ ಸ್ಕೂಲಿಗೆ ಹೋಗೋ ಮರಿ!

ಹುಳ ಹೊಕ್ಕಿತು

ಅವರ ನಡುವೆ ಎದ್ದು ನಿಂತು
ಮಾತನಾಡಲು ಧೈರ್ಯವಿಲ್ಲ;
ಇವರ ಮುಂದೆ ಮತ್ತೆ ಬಂದು
ಓಡಾಡಲು ನಾಚಿಕೆ.

ಓಟು ಬೇಟೆಯ ಕಾಲದಲ್ಲಿ
ಮಾತ್ರ ಈತ ಟೋಪಿ ಧರಿಸಿ
ಮೂಟೆ ಬಿಚ್ಚಿ ಲೆಕ್ಚರ್ ಕೊಚ್ಚಿ
ಜಂಭ ಕೋಣವ ಮಾಡಿದ.

ತಣ್ಣಗವನು ನುಣ್ಣಗಾಗಿ
ಸೌಧದಿಂಬಲಿ ಕೂರುತ
ಮೂಲೆ ಹಿಡಿದು ಮುದ್ದುರಿ ಕೊರಗಿ
ನಿದ್ದೆ ಹೆಣ್ಣನು ಕೂಡಿದ

ಅವಗು, ಅವಗು, ಬಂತು ಕೀರ್ತಿ
ಕಂಠಪೂರ್ತಿ ಭತ್ಯಭರ್ತಿ
ಇವಗೆ ಮಾತ್ರ ನಾಸ್ತಿ, ನಾಸ್ತಿ,
ಆಸ್ತಿ ಮುಳುಗಿತು, ಸಾಲದಿ

ಆದರವನಾ ಬುರುಡೆ ಕೆಟ್ಟಿತು
ಕೀರ್ತಿ ಕೀಟದ ಕೊರೆತಕೆ
ರಾಜಕೀಯದ ರೋಗ ತಗುಲೆ,
ರಾಜಿ ಮಾತೇ ಸಲ್ಲದು.

ಬಾಜಿ ಕಟ್ಟಲು ಹೊರಟರೆಂದರೆ
ಮೆಂಬೆರೆಲ್ಲರು ಹುಂಬರು
ಬಸ್ಸಿನೊಳಗೂ ರೈಲು ಗಾಡಿಯ
ಒಳಗೂ ಒಲೆಯ ಮುಂದೆಯೂ

ಬಡಬಡವಿನ ಇವನ ನಾಲಗೆ
ಬಡಿವುದಮಮ! ನಿಲ್ಲದೆ
ಆದರೆವಗೂ ಇವನ ನಂಟಗೂ
ಒಂದು ಪೆರ್ಮಿಟ್ ಸಲ್ಲದೆ?

ಕೈಯ ನೀಡಿದ ಹಲವು ಬಾರಿ
ಕಾಣಬಂತವಲಕ್ಷಣ
ಆದರಿನ್ನೂ, ರೋಸಿ ಹೇಸನು
ಕಾಯ್ವನಿನ್ನೊಂದಿಲಕ್ಷನ!

— ಹೆಚ್. ಕಾಮತ್

ಇದೂ ಒಂದು ಸೇವಾಕಾರ್ಯ

"ನನ್ನ ಕೇಳಿ, ನಾನು ಹೇಳುತ್ತೇನೆ", "ಇವೆಲ್ಲ ಪೇಪರಲ್ಲಿ ಬರುವುದಿಲ್ಲ; ಆದರೆ, ನನ್ನನ್ನ ಕೇಳಿ, ನಾನು ಹೇಳಿಕೊಡುತ್ತೇನೆ", "ನನ್ನ ಮಾತು ಕೇಳಿದರೆ, ನಿಮಗೆ ಅನುಕೂಲ, ಅವರಿವರ ಮಾತು ಕೇಳಿ ಹಾಳಾಗಬೇಡಿ."

ಹೀಗೆ, ಕೂಗಿಕೊಳ್ಳುವ ವ್ಯಕ್ತಿಗಳು ಹಲವರು, ಮಂತ್ರಿಗಳ ಮನೆ ಮುಂದೆ ಇರುತ್ತಾರಂತೆ, ಆ ರಾಜ್ಯದಲ್ಲಿ. ಯಾವ ಮಂತ್ರಿಯನ್ನು ಯಾರ ಮೂಲಕ ಯಾವಾಗ ಕಾಣಬೇಕು, ಎಂಬುದನ್ನ ತಿಳಿಸುವುದೇ ಅವರ ಮುಖ್ಯ ಸೇವಾಕಾರ್ಯ. ಯಾವ ಮುಖ್ಯ ಮುಖ್ಯ ಅಧಿಕಾರಿಗಳಿಗೆ ವರ್ಗ, ಭಡ್ತಿ, ಸಸ್ಪೆನ್‌ಷನ್, ಕೆಳದರ್ಜೆಗೆ ಪತನ, ಎಂಬುದನ್ನೆಲ್ಲ ಇವರು ಬಲ್ಲರು. ಹಳದೀ ಪತ್ರಿಕೆಗಳಿಗೆ ಸುದ್ದಿಕೊಡುವವರು, ಇವರೇ! ಅಷ್ಟು ಸುದ್ದಿಗಳನ್ನು ಇವರು ಎಲ್ಲಿಂದ ಸಂಗ್ರಹಿಸುತ್ತಾರೆ, ಅಂತೀರೋ? ಅವರ ನಂಟರ ಪೈಕಿ, ಹಲವರು ಕ್ಲಾರ್ಕುಗಳು, ಹಲವರು ಮಂತ್ರಿಗಳ ಮನೆಯ ಆಳುಗಳು, ಅಡಿಗೆಯವರು. ಒಬ್ಬಿಬ್ಬರು, ಕಾರ್ ಡ್ರೈವರುಗಳು ಭಾರಿ ಭಾರಿ ಜನಗಳನ್ನೆಲ್ಲ ಅವರು ಟೀ. ಸಿ., ಕೆ. ಎಲ್. ಟಿ., ಎಂದೆಲ್ಲ ಬರಿಯ ಬಿಡಿ ಅಕ್ಷರ ಜೋಡಣೆಗಳಿಂದಲೂ, ಅವರು ಹೆಸರಿಸುವುದು.

ಪತ್ರಿಕೆಗಳಲ್ಲಿ ಬಂದ ಸುದ್ದಿಗಳಿಗೆ, ಒಳ ಅರ್ಥವನ್ನು ಊಹಿಸಿ ಹೇಳುವುದರಲ್ಲಿ ಅವರು ನುರಿತವರು. "ಕಳೆದ ಚುನಾವಣೆಯಲ್ಲಿ, ಈತ ಅಷ್ಟು ಶ್ರಮವಹಿಸಲಿಲ್ಲವಂತೆ, ಅದಕ್ಕೇ ಅಲ್ಲಿ ಅಷ್ಟು ಕಡಿಮೆಬಂದದ್ದು, ಆದ್ದರಿಂದಲೇ, ಅವರಿಗೆ ಈ ಶಿಕ್ಷೆ", ಎಂದು ನಮಗೆ ಅವರು ಗುಟ್ಟಾಗಿ ತಿಳಿಸುತ್ತಾರೆ. "ಹೋದ ತಿಂಗಳು ಮಂತ್ರಿಗಳು ಪ್ರವಾಸ ಹೋಗಿರಲಿಲ್ಲವೇ? ಆಗ, ತುಂಬಾ ಅವ್ಯವಸ್ಥೆಯಾಗಿತ್ತಂತೆ — ನಿರೀಕ್ಷಿಸಿದಷ್ಟು ಚಪ್ಪರಗಳಿಲ್ಲ, ಹಾರಗಳು ತೀರಕಡಿಮೆ, ಅಡ್ರೆಸ್ಸುಗಳಂತೂ ಮೂರೋ ನಾಲ್ಕೋ, ಪೆಟ್ರೋಲು ಪೂರ ದಂಡ, ಅದಕ್ಕಂತೆ, ಅವನನ್ನ.... " ಎಂದು ಅವರು ಕಿವಿಯಲ್ಲಿ ಉಸುರುತ್ತಾ ಇದ್ದರೆ, "ಎಲಾ ಇವನೆ? ಎಷ್ಟು ಆಳವಾಗಿ ರಾಜಕೀಯದ ಬಾವಿಗೆ ಇಳಿದಿದಾನೆ, ಈತ!" ಎಂದು ನಾವು ಮೂಗಿನಮೇಲೆ ಬೆರಳಿರಿಸುವೆವು.

ಅವರ ಭಾವನಾಶಕ್ತಿ ಅಪಾರ. ಯಾವ ಸಂಭವಕ್ಕೂ ಸಂಘಟನೆಗೂ ಅವರು ನೇರವಾದ ಕಾರಣವನ್ನು ಒಪ್ಪುವುದೇ ಇಲ್ಲ. "ಮೇಲುಮೇಲಕ್ಕೆಹಾಗೆ....ಒಳಗಿನ ಗುಟ್ಟು ಬೇರೆ" ಎನ್ನುತ್ತ, ಅವರು ನಮ್ಮ ಹೆಗಲಮೇಲೆ ಕೈಹಾಕಿ, ನಮ್ಮನ್ನ

ಹೋಟೆಲೊಳಕ್ಕೆ ಕರೆದೊಯ್ಯುವರು. ಆಯಿತು! ಇನ್ನು ಅವರ ಬುದ್ಧಿವಂತಿಕೆಯ ಪ್ರದರ್ಶನ, ನಮ್ಮ ದಡ್ಡತನಕ್ಕಾಗಿ, ನಾವು ಜುಲ್ಮಾನೆ ತೆತ್ತು, ನಿರ್ಗಮನ! ಅಷ್ಟೆ ಉಳಿದಿರುವುದು.

ಅವರನ್ನು ನಂಬುವುದಾದರೆ, ಪ್ರತಿ ಒಬ್ಬರೂ ಸ್ವಾರ್ಥಪರರು, ಗುಟ್ಟಾಗಿ ಆಸ್ತಿ ಮಾಡಿಕೊಳ್ಳುವ ಆಸೆಬುರುಕರು, ಲಂಚಕೋರರು; ನಂಟರಿಷ್ಟರ ಮೂಲಕವೇ ಪ್ರತಿ ಒಬ್ಬರೂ ಲಂಚ ರುಷುವತ್ತನ್ನು ಪಡೆಯುವುದು. ಬರೀಕೈಲಿ ಯಾರನ್ನೂ ನೋಡ ಬಾರದು, ಅದು ವೃಥಾಕಾಲಕ್ಷೇಪ.

ಯಾರ ಮುಂದೆ, ಯಾರನ್ನು ಬೈದರೆ, ನಮಗೆ ಅನುಕೂಲ, ಎಂಬುದನ್ನೂ ಅವರು ಹೇಳಿಕೊಡುತ್ತಾರೆ ಎಂಥೆಂಥಾದ್ದನ್ನು ಎತ್ತಿ ಆಡಬೇಕು, ಎಂಬುದನ್ನೂ ಉಪದೇಶಿಸುತ್ತಾರೆ.

ಇಂಥವರಿರುವುದರಿಂದಲೇ, ಪ್ರಜಾಪ್ರಭುತ್ವ ಆ ರಾಜ್ಯದಲ್ಲಿ ಸುಸೂತ್ರವಾಗಿ ನಡೆಯುತ್ತಿರುವುದೆಂಬುದು, ಗಮನಾರ್ಹವೆಂದು ಅಲ್ಲಿಯವರು ತಿಳಿಸುತ್ತಾರೆ.

— ಪ್ರಸಾದ್.

—— o ——



ವಿಶ್ವಾಮಿತ್ರ ಋಷಿಗಳು ಚಂದ್ರಮರಿ ಮಾತ್ರವಲ್ಲ—ತ್ರಿಶಂಕು ಸ್ವರ್ಗವನ್ನೇ ಸಾಧಿಸಿದ್ದರಲ್ಲವೇ! ! ವಾದ್ಯಾರ್‍ರೇ! !

ನಾ ಮಂತ್ರಿಯಾಗಲೊಲ್ಲೆ

'ಕೋಣನೂರಿನಲ್ಲಿ ದಂಗೆಯಾದುದು ನಿಜವೇ ?'

'ಸರ್ಕಾರದ ಗಮನಕ್ಕೆ ಬಂದಿಲ್ಲ.'

'ಕೂಳೂರಿನ ಮಠದಲ್ಲಿ ಅಫರಾ ತಫರಾ ಆದುದು ನಿಜವೇ ?'

'ಪರಿಶೀಲಿಸಿ ಹೇಳಬೇಕು.'

'ಸರ್ಕಾರೀ ಆಡಳಿತದ ಬಿಗಿ ತಪ್ಪಲು ಕಾರಣವೇನು ?'

'ನಾನು....... .... ನೋಟೀಸ್.'

ಹೀಗೆಲ್ಲಾ ಉತ್ತರ ಕೊಡುವ ಪರಿಸ್ಥಿತಿಯೊದಗುವುದೆಂದೇ ನಾ ಮಂತ್ರಿಯಾಗಲೊಲ್ಲೆ.

'ನೆಲ್ಲಕ್ಕಿಬಾನ ಒಲ್ಲೆ' 'ಯಾಕೊಲ್ಲೆ' 'ಇಲ್ಲದ್ದಕ್ಕೊಲ್ಲೆ' ಎಂಬ ಸಂಭಾಷಣೆಯನ್ನೂ, 'ಅಂಥಾ ರತ್ನವಾಗಿದ್ದರೆ ತಿಪ್ಪೆಯಲ್ಲೇಕೆ ?' ಎಂಬ ಶಂಕೆಯನ್ನೂ ಸಾಮತಿ ಕೊಟ್ಟು ನನ್ನನ್ನು ಎಲ್ಲರೂ ಹಂಗಿಸಿದರೂ, ನನ್ನ ನಿರ್ಧಾರ ಅವಿಚಲಿತವಾಗಿವೆ.

ಆಡಳಿತ ಮಾಡಬೇಕೆಂಬ ಆಸೆ ನನಗೆ ಇಲ್ಲವೇ ಇಲ್ಲ. ನನ್ನ ಎದೆಯನ್ನು ಸೀಳಿ ಬೇಕಾದರೆ ನೋಡಿ. ಅಲ್ಲಿ ಮೂರಕ್ಷರಗಳೂ ಇಲ್ಲ, ಮಂತ್ರಿಯಾಬೇಕೆಂಬ ಆಶೆಯೂ ಇಲ್ಲ.

ಮಂತ್ರಿಯಾಗುವ ಯೋಗ್ಯತೆ ನಿನಗೆಲ್ಲಿದೆ ಎಂದು ಕೇಳಬೇಡಿ. ಮಂತ್ರಿಗಳಾಗಲು ಭಾರೀ ಯೋಗ್ಯತೆಯೇನೂ ಬೇಡ. ಒಂದು ಸತ್ಯಕಥೆ ಹೇಳುತ್ತೇನೆ ಕೇಳಿ:—

ರಷ್ಯಾದ ಮುಖ್ಯಮಂತ್ರಿ ಬುಲ್ಗನಿನ್, ಅಪ್ರತಿಮ ರಾಜಕಾರಣಿ ಕೃಷೇವ್ ಬೆಂಗಳೂರಿಗೆ ಬಂದಿದ್ದರಲ್ಲ; ಅವರನ್ನು ನೋಡಲು ಹೋಗಿದ್ದೆ. ಅವರಿಗಾಗಿ ಕಾಯುತ್ತಾ ಫುಟ್ ಪಾತಿನಮೇಲೆ ನಿಂತಿದ್ದೆ. ನನ್ನ ಪಕ್ಕದಲ್ಲೇ ನಿಂತಿದ್ದವನೊಬ್ಬ 'ಐಕ್ ಶುದ್ಧ ಮಡ್ಡಿ' ಎಂದು ಲೆಕ್ಚರ್ ಕೊಡುತ್ತಿದ್ದ. ಕೃಷೇವ್ ಹಾಗೆ ಹೀಗೆ ಲಂಗುಲೊಟ್ಟು ; ಬುಲ್ಗನಿನ್ನೇ ಬಿಜಾಪುರ ಬುಲ್ಗನಿನ್ನೇ ಬೋಳುಗುಮ್ಮಟ ಅಂತಲೂ ಹೊಗಳುತ್ತಿದ್ದ. ಆ ರಷ್ಯನರು ಹೇಗಿದ್ದಾರು ? ಅವರನ್ನು ಯಾವಾಗ ನೋಡಿಯೇನು ಎನ್ನುವ ಕುತೂಹಲ ನನಗೆ ಕೆರಳಿತು. ಅವರು ಇಂದ್ರ, ಚಂದ್ರ ಅಂದುಕೊಂಡೆ. 'ಹಿಂದಿ ರೂಸಿ ಭಾಯ್ ಭಾಯ್' 'ಬುಲ್ಗನಿನ್ ಗೆಲ್ಗೆ' ಇತ್ಯಾದಿ ಕೂಗುಗಳು

ಇದ್ದಕ್ಕಿದ್ದಂತೆ ನಭೋಮಂಡಲವನ್ನು ಭೇದಿಸಿದುವು. ಬುಲ್ಗನಿನ್-ಕೃಷೇವ್ ಕಾರು ನನ್ನೆದುರಿಗೆ ಬಂದಿತು. ನಾನು 'ಓ' ಎಂದು ಒದರಿದೆ. ಅವರಿಬ್ಬರು ನಗುನಗುತ್ತಾ ನನ್ನನ್ನು ನೋಡಿದರು. ಕಾರು ಮುಂದಕ್ಕೆ ಹೋಯ್ತು. ನನಗೆ ನಿರಾಶೆಯಾಯ್ತು. ಬುಲ್ಗನಿನ್ 'ಶೋ' ಎನ್ನಲೇ ಇಲ್ಲ. ಅಂಥವನು ರಷ್ಯವನ್ನಾಳುತ್ತಿರಬೇಕಾದರೆ........ ಹಾಗೇ ಕೊಂಚ ತ್ರೈರಾಶಿ ಲೆಕ್ಕಹಾಕಿ. ನಾನೂ ರಾಜ್ಯವನ್ನಾಳಲು ಸಮರ್ಥನೇ; ಆದರೂ ಮೊದಲೇ ಹೇಳಿದಂತೆ ನನಗದು ಬೇಡ.

ಟ್ರೆಷರಿ ಬೆಂಚಿನಮೇಲೆ ಕುಳಿತು ಬೆವಾನ್, ಕಾಮತ್, ಸ್ಟೀವನ್‌ಸನ್, ಭಷಾನಿಗಳ ಬೈಗಳ ಸುರಿಮಳೆಯಲ್ಲಿ ನೆನೆಯಲಾರೆ. ಬರ್ಜೆಸ್‌ಮನೌರಿ, ಚೌ, ಮಹಮುದಾಲಿ, ರಾಶಿವಾಲಾಗಳ ಪರಿಸ್ಥಿತಿ ನನಗೊದಗುವುದು ಬೇಡ. ಅವಿಶ್ವಾಸ ನಿರ್ಣಯಗಳು, ವಾಕೌಟುಗಳು, ಕೋಳಿತತ್ತಿ ಪೂಜೆಗಳು ಇತ್ಯಾದಿಗಳನ್ನು ಕಂಡರೆ ನನಗಾಗದು. ಕೆಂಪು ಪಟ್ಟಿಯನ್ನು ಕತ್ತಿಗೆ ಬಿಗಿದು ದುರಪವಾದದ ಶೂಲಕ್ಕೇರಲಾರೆ. ಪಕ್ಷರಾಜಕೀಯದ ಉದ್ದಿನೊಡೆ ನನಗೆ ಬೇಡ. ದೊಣೆನಾಯಕನಾದ ನನ್ನನ್ನು ಉಳಿದವರು ದೇಶನಾಯಕನೆಂದು ' ಕರೆಯಬೇಕಿಲ್ಲ. ನನಗಾಗದವರು ನನ್ನನ್ನು ಸ್ಕೌಂಡ್ರಲ್ ಎಂದರೂ ಚಿಂತೆಯಿಲ್ಲ; ನನ್ನ ಲಾಸ್ಟ್ರಿಸಾರ್ಟನ್ನು ಮರೆಹೊಕ್ಕಿಲ್ಲವೆಂದ ವರಿಗೆ ಹೇಳುವ ಪರಿಸ್ಥಿತಿಯಲ್ಲಿ ನಾನಿರಬೇಕು.

ಮಂತ್ರಿ, ಮುಖ್ಯಾಮಾತ್ಯನಾಗುವುದರಿಂದ ಸಾಧಿಸುವ ಪುರುಷಾರ್ಥವಾದರೂ ಏನು? ಮಳೆ ಹೆಚ್ಚು, ಮಳೆ ಕಡಿಮೆ; ಜೀವನಮಟ್ಟ ಏರುತ್ತಿದೆ, ಏರುತ್ತಿಲ್ಲ; ಇಂಥಾ ದರಿದ್ರ, ಮಂತ್ರಿಯಾದ್ದರಿಂದಲೇ ಕಾಲ ಕೆಟ್ಟದ್ದು; ಎಂಬ ಮಾತು ಕೇಳಿದರೇನು ಕೋಡು ಮೂಡುತ್ತದೆಯೇ?

'ಮಹನೀಯರೇ, ನಾವಿಂದು ನೆರೆದಿರುವುದು ಚರಿತ್ರಾರ್ಹ ಘಟನೆ ದೇಶದ ಮೂಲಭೂತ ಭದ್ರತೆಗೆ ಅತ್ಯವಶ್ಯವಾದ ಮಂಡಕ್ಕಿ-ಖಾರ ಕೈಗಾರಿಕೆಯ ಪುರೋಭಿವೃದ್ಧಿಗೆ ಮಾರ್ಗಗಳನ್ನು ಕಂಡುಹಿಡಿಯಲೆಂದು ನಾವಿಲ್ಲಿ ನೆರೆದಿದ್ದೇವೆ. ಹಸೇ ಉಳ್ಳಾಗಡ್ಡಿ, ಎಳೇಕೊತ್ತಂಬ್ರಿಸೊಪ್ಪುಗಳ ಉತ್ಪನ್ನ ಹೆಚ್ಚಿಸದಿದ್ದರೆ ರಾಷ್ಟ್ರ ಬಹು ಕಾಲ.... ....'

ಯಾವ ದೇವರಿಗೆ ಪ್ರೀತಿ ಇಂತಹ ಚರಿತ್ರಾರ್ಹ ಭಾಷಣದಿಂದ.

'ಮಿತ್ರರೇ ನನ್ನ ಪತ್ನಿಯನ್ನು ನಾನು ಪ್ರೀತಿಸುತ್ತೇನೆ. ನಿಮ್ಮ ಪತ್ನಿಯರನ್ನು ನೀವು ಪ್ರೀತಿಸಿರಿ' ಎಂಬಿತ್ಯಾದಿ ನೀತಿಬೋಧೆ ಮಾಡಲು ಮಂತ್ರಿಗಳೇ ಬೇಕೆ?

ಮುಖ್ಯಮಂತ್ರಿಯಾಗಿ ಅಣುವಿಜ್ಞಾನಿಗಳ ಕೂಟದಲ್ಲಿ ಭಾಷಿಸುತ್ತಾ 'ಅಣು, ಹಿರೋಷಿಮಾ ಶಾಂತಿಯನ್ನು ಸಾಧಿಸಿತು. ಅಂತೆಯೇ ವಿಶ್ವಶಾಂತಿಯನ್ನೂ ಸಾಧಿಸೀತು. ಈ ದಿಶೆಯಲ್ಲಿ ಪ್ರಯತ್ನಿಸುವಾ' ಎನ್ನುವುದು ನನಗೆ ಒಗ್ಗದು.

'ವಿಜ್ಞಾನವೋ, ಮಾನವಕುಲವೋ ?' ಎಂದು ಪತ್ರಿಕಾ ಪ್ರತಿನಿಧಿ ಕೇಳಿದಾಗ ಆಕ್ಕಿಯಮೇಲೆ ಆಶೆ ನಂಟರಮೇಲೆ ಪ್ರೀತಿ ಎಂದು ಅವನಿಗೆ ಹೇಳುವುದಾದರೂ ಹೇಗೆ ?

ಇಷ್ಟರಮೇಲೆ ಯಾವನಾದರೂ ಬಂದು ನನ್ನ ಬಳಿ ನಿಂದು 'ಓ' ಎಂದಾಗ 'ಠೋ' ಎನ್ನುವುದನ್ನು ನಾನು ಮರೆತುಬಿಟ್ಟರೆ, ನನ್ನ ಮರ್ಯಾದೆ ಏನಾದೀತು.

ಪರದೇಶೀಯ ರಾಷ್ಟ್ರಪ್ರಮುಖರು ಬಂದಾಗ, ಮಹಾಮೊಗ್ಗಲಾನನ ಅವಶೇಷ ಗಳನ್ನು ಸ್ವೀಕರಿಸುವಾಗ, ಕಂಬಳಿನೆಯ್ಗೆಯ ಸಹಕಾರ ಸಂಘದ ಉದ್ಘಾಟನೆಮಾಡು ವಾಗ, ಶಿಶುವಿಹಾರದಲ್ಲಿ, ನನ್ನ ಅಮೋಘವಾಣಿ ಏನೆಂದೀತು ಎಂಬ ನೆಚ್ಚಿಗೆ ನನಗೇ ಇಲ್ಲ. ಇದೆಲ್ಲ ತಿಳಿದಿದ್ದೂ ಮಂತ್ರಿಯಾಗಲೇಕೆ ?

ಸಾಹಿತ್ಯಕೂಟಕ್ಕೆ ಹೋಗಿ : "ಹಿಡಂಬಿಗೆ ಹೆದರಿದ ಭೀಮನಂತೆ ಈ ಲೋಕದ ಕಾಠಿಣ್ಯವನ್ನು ಕಂಡು ಮಾನವಕುಲ ಬೆದರಿದೆ. ಕವಿ ಈ ವಿಷವನ್ನು ಕುಡಿವ ನೀಲಕಂಠನಾಗಬೇಕು. ಅವರ ಬರವನ್ನು ಈ ಲೋಕ ಮಳೆಗಾಗಿ ಕಾಯುವ ಕೋಗಿಲೆಯಂತೆ ಕಾಯುತ್ತಿದೆ" ಎಂದರೆ ಸಾಹಿತ್ಯಕೂಟ ಸಭಾಂಗಣದ ನೊಣಗಳೂ ನಕ್ಕುಬಿಟ್ಟಾವು. ಏಕೆಂದರೆ (1) ಕೋಗಿಲೆ ಮಳೆಗಾಗಿ ಕಾಯುವುದಿಲ್ಲ. (2) ಈ ಲೋಕವು ಕವಿಯನ್ನು ಕಂಡು, ಹಿಡಿಂಬಿಯನ್ನು ಕಂಡ ಭೀಮನಂತೆ ತತ್ತರಿಸುತ್ತಿದೆ.

ಬುದ್ಧಜಯಂತೀ ಭಾಷಣವನ್ನು ಶಿಶುವಿಹಾರದಲ್ಲಿ ಮಾಡುತ್ತಾ, "ಮಕ್ಕಳೇ, ಜೀವನವು ದುಃಖಮಯ; ಆಶೆಯೇ ದುಃಖದ ಮೂಲ; ಪ್ರಾಪಂಚಿಕ ಸುಖದ ಆಶೆಯನ್ನು ಬಿಡಬೇಕು" ಎನ್ನಲು ನನಗೆ ಬಾಯೇ ಬರದು. ಮಕ್ಕಳಿಗೆ ಹಾಗೆಲ್ಲಾ ಹೇಳಬಾರದು.

ಒಂದುಪಕ್ಷ ಬಿನ್ನವತ್ತಳೆಯನ್ನು ಹರಳೆಣ್ಣೆಯಂತೆ ನುಂಗಿದರೂ ಸ್ವಾಗತಪದ್ಯ ವನ್ನು ಸಹಿಸಲು ನನಗೆ ಸಾಧ್ಯವೇ ಇಲ್ಲ.

ಬೆದರಿಕೆ, ಪುಸಲಾವಣೆ, ಲಂಚ, ಕೋಮುವಾರು ಇತ್ಯಾದಿ ಅಘರಾತಘರಾ ನಡೆಸಿ ಚುನಾಯಿತನಾಗಿ ತದನಂತರದಲ್ಲಿ 'ನನ್ನ ನಾಯಕತ್ವದಲ್ಲಿ ಏಕಾನುಮತದಿಂದ ನಂಬಿಕೆಯಿಟ್ಟು ನನ್ನನ್ನಾರಿಸಿದಿರಿ ಆ ನಂಬಿಕೆಯೇ ನನ್ನ ಶಕ್ತಿ' ಎಂಬ ಅಭಿನಂದನೆ ಯನ್ನು ಮತದಾರರಿಗೆ ಸಲ್ಲಿಸುವ ಮನಸ್ಥೈರ್ಯ ನನಗೆಲ್ಲಿಂದ ಬರಬೇಕು ? ಬಂದರೂ ಹಾಗ ಮಾಡಲೊಲ್ಲೆ.

'ಸ್ವಜನಾಭಿವೃದ್ಧಿ Inc.' ಸಂಸ್ಥೆಯ ಅಧ್ಯಕ್ಷಪದವಿ ನನಗೆ ಬೇಡ. ಅದಕ್ಕಿಂತ ಗೌರವ ಸದಸ್ಯತನವೇ ಮೇಲು. ಅದೂ ನನಗೆ ಬೇಡ. ಭಾರತ ಸಂಪತ್ಸಮೃದ್ಧ ದೇಶವಾದಮೇಲೆ ಬೇಕಿದ್ದರೆ ಒಂದುಕೈ ನೋಡುವಾ.

ಮೃಗಸಂಪತ್ ಅಭಿವೃದ್ಧಿ, ಟೂರಿಂಗ್ ಟಾಕೀಸ್ ಬೆನಿಫಿಟ್‌ಷೋ, ಸೀಟಿನ, ಓಟಿನ ಬೇಟೆ, ಗುಮಾಸ್ತರ ಇಂಕ್ರಿಮೆಂಟ್, ಎಕಾನಮಿ ಡ್ರೈವ್, ಮೇಷ್ಟರ ಟ್ರಾನ್ಸ್‌ಫರು ಮೊದಲಾದ ಜರೂರು ಕೆಲಸಗಳ ನಿರ್ವಹಣೆಮಾಡುವ ಆಶೆ ನನಗಿಲ್ಲ.

ಪ್ರಧಾನಿತನವೂ ಬೇಡ, ಅದರ ರಗಳೆಯೂ ಬೇಡ, ದೌಲತ್ತೂ ಬೇಡ. ಹಾಗೆ ಹೇಳುವುದಾದರೆ, ವ್ಹಿಪ್ಪುಗಳ ಆದೇಶದಂತೆ ಉಳಿದವರು ಕೈಯೆತ್ತಿದಾಗ ತಾನೂ ಕೈಯೆತ್ತುವ, ಅಸೆಂಬ್ಲಿಹಾಲಿನಲ್ಲೇ ಮಲಗಿ 'Shame, Shame' ಎಂಬ ಕೂಗುಗಳ ನಡುವೆ ಕಣ್ಣೊರೆಸಿಕೊಂಡು ಆಕಳಿಸುತ್ತಾ ಏಳುವ ಆರ್ಡಿನರಿ ಸದಸ್ಯತ್ವವೂ ಬೇಡ.

ಶರದೃತುವಿನ ನಿರ್ಮಲಾಕಾಶದಲ್ಲಿ ಸೂರ್ಯ ತೇಲುತ್ತಿರಲಿ, ತಂಗಾಳಿ ಬೀಸಲಿ, ಜೀವನದ ಕಪ್ಪನ್ನು ಕಾಫಿ ತೊಳೆಯಲಿ, ತಂಬಾಕಿನ ಧೂಮದಿಂದ ಬಾಳು ಪರಿಮಳಿತವಾಗಿರಲಿ. ನನ್ನಷ್ಟಕ್ಕೆ ನನ್ನನ್ನು ಬಿಟ್ಟುಬಿಡಿ. ನಾನು ಹಾಯಾಗಿರುತ್ತೇನೆ. ಮಂತ್ರಿಪದವಿ ನನಗಲ್ಲ.

— ಅ. ರಾ. ಸೇ.

———o———



ದಫೇದಾರ್ ದೇರಣ್ಣೋರು

(ಅಳಿಯ ದೇವರು)

ಒಂದು ರೌಂಡು ಊರನ್ನೆಲ್ಲಾ ಸುತ್ತಿ — ಪಟಾಕಿ ಮಾರುವವರನ್ನೆಲ್ಲಾ "ಲೈಸನ್ಸ್ ಎಲ್ಲಿ" ಎಂದು ಗದುರಿ ನಡೆದಾಗ, ಅವರ ಹಿಂದೆಯೇ ಕಾನಿಸ್ಟೇಬಲ್ ಈರಯ್ಯ ದೊಡ್ಡ ಚೀಲದೊಡನೆ ನಡೆದಿದ್ದ. ಮುಂದೆ ಮುಂದೆ ದೇರಣ್ಣೋರು ನಡೆದಾಗ ಹಿಂದಿನಿಂದ ಚೀಲ ತುಂಬುತ್ತಿತ್ತು. ಮಾಮೂಲು ನಡೆದಿತ್ತು.

ನಾನು ಯಥಾಪ್ರಕಾರ ನನ್ನ ನಂದಕುಲಕ್ಕೆ ಚುರುಚುರುಬತ್ತಿ ಕೊಳ್ಳಲು ನಿಂತಿದ್ದೆ. ಸುತ್ತಲಿದ್ದ ನನ್ನ ಪಿಳ್ಳೆಗಳೊಂದೊಂದಕ್ಕೆ ಒಂದೊಂದು ಮತಾಪಿನ ಕಟ್ಟು, ಒಂದೊಂದು ಹೂವಿನಕಡ್ಡಿ, ಅರ್ಧ ಚಿನಕುರುಳಿ ಕೊಡಿಸೋದಕ್ಕೆ ನಿಂತಿದ್ದೆ.

"ಏನು ರಾಯರೇ........"

"ನಮಸ್ಕಾರ ದಫೇದಾರ್ರಿಗೆ"

"ಘಟಾಕಿ ಉಡಾಯ್ಸಿಲ್ವೇರೋ"—ಎಂದು ಫಿರಂಗಿ ಹೊಡೆದವರಂತೆ ಹೇಳಿದರು.

"ನಮ್ಮ ಫಟಾಕಿ ಸದ್ದೇ ಇಲ್ಲದ್ದು — ಎಲ್ಲಾ ಟುಸಮದ್ದು... ...." ಎಂದು ನಿಜಾಂಶ ತಿಳಿಸಿದೆ. ಜೇಬಲ್ಲಿ ಹಣ ಇದ್ದರೆತಾನೆ ಶಬ್ದ ಮಾಡಲಿಕ್ಕೆ ?

"ಲೋ ಈರಯ್ಯಾ........" ಎಂದರು. ಆ ಕಡೆ ಅಂಗಡಿಯಲ್ಲಿ ತರ್ಕಾರಿಯಂತೆ ಚೀಲದಲ್ಲಿ ಮದ್ದು ತುಂಬಿಸುತ್ತಿದ್ದ ಈರಯ್ಯ ಓಡಿಬಂದ.

"ಚೀಲ ಹಿಡಿರಿ ರಾಯರೆ" ಎಂದರು.

"ಯಾತಕ್ಕೆ ?........ಏನು .. ...."

—ಎಂದು ಏನೇನೋ ನಾನು ತೊದಲುತ್ತಿದ್ದಂತೇ ನನ್ನ ಕೈಯ್ಯ ಚೀಲಕ್ಕೆ ಧಾರಾಳವಾಗಿ ಮತಾಪು - ಫಟಾಕಿ—ಸುರುಸುರುಬತ್ತಿ—ಹೂವಿನ ಕುಡಿಕೆ—ಜೀರಿಗೆ ಪಟಾಕಿ—ಆನೆ—ಕುದುರೆ—ಕತ್ತೆ—ಮೇಕೆ ಮಂಗ—ಜಿಂಕೆ ಇತ್ಯಾದಿ ಪಟಾಕಿ

ಎಂದರೇನೆಂಬುದನ್ನೇ ಅರಿಯದ ಪ್ರಾಣಿಗಳನ್ನೆಲ್ಲಾ ಹೆಸರಿಟ್ಟ ನಾನಾ ನಮೂನೆಯ ಮದ್ದನ್ನು ಹೇರಳವಾಗಿ ನನ್ನ ಚೀಲಕ್ಕೆ ತುಂಬಿದರು. ನಮ್ಮ ಹುಡುಗರಿಗೋ ಖುಷಿಯೋ ಖುಷಿ. ಅವರ ಜನ್ಮದಲ್ಲೇ ಇಷ್ಟೊಂದು ಮದ್ದು ಕಾಣದ ಸುಧಾಮ ಸುತರಂತಹ ನನ್ನ ಮಕ್ಕಳು ಆನಂದಸಾಗರದಲ್ಲಿ ಮಿಂದು ಈ ಜಾಡಿ ಕೇಕೇಹೊಡೆದು ದಫೆದಾರರನ್ನು ಈತ ದೇವತೆಯೋ ಎಂಬಂತೆ ಕಂಡರು.

"ಇದೇನು ದಫೆದಾರ್ರೇ....... ನಿನ್ಮ ಕೆಲಸಾ"

"ಮಕ್ಕಳೇ ದೇವರು—ದೇವರ ಕೆಲಸ ಸರ್ಕಾರದ್ದಲ್ಲವೆ ? ಹುಡುಗರ ಮಕ ನೋಡಿ ಅರಳಿದ ಹೂವಿದ್ದಹಂಗೆ ಆಗೈತೆ........"

—ಎಂದು ಮಕ್ಕಳಂತೆಯೇ ನಕ್ಕರು. ನನ್ನ ಚೀಲ ಹೊತ್ತು ಕೇ ಕೇ ಹೊಡೆಯುತ್ತಾ ಮನೆಕಡೆ ಹೊರಟಿತು ನನ್ನ ವಾನರಸೇನೆ.

"ಲೋ ಈರಾ—ಖಾಲಿ ಆಗಿರೋ ಚೀಲ ಮತ್ತೆ ಭರ್ತಿಮಾಡಿ ಮನೆಗೆ ಕೊಟ್ಟು ಬಿಡು ನಾನು ಬಂದು ಮತಾಪು ಹಚ್ತೀನಿ........"

—ಎಂದಾಗ ಈರಯ್ಯ ಮತ್ತೆ ಮಾಮೂಲಿ ವಸೂಲಿಗೆ ಹೊರಟ. ನಾನು ದಫೆದಾರ್ರು ಗುಂಡಪ್ಪನ ಹೋಟಲಿಗೆ ಹೋದೆವು. ದಫೆದಾರರನ್ನು ನೋಡುತ್ತಲೇ ಒಂದು ಸೇರು ಪಕೋಡ ಕಟ್ಟಿಕೊಟ್ಟ ಆ ಹೋಟಲಿನವ. ನೇರವಾಗಿ ನಿಬಿಡವಾದ ಪೋಲೀಸ್ ಸ್ಟೇಷನ್ ಹಿಂದೆ ಹುಲ್ಲಿನಮೇಲೆ ಕುಳಿತೆವು. ಬಹಳ ಆರಾಂ ಇತ್ತು ಜಾಗ.

"ಹೇ ೀ ಫಕೀರಾ ಾ ...." ಎಂದರು.

—ಈ ಕೂಗು ಪಕೀರನಿಗೆ ಚಿರಪರಿಚಿತವಾದದ್ದೂ ಅದು ಏನು ಸೂಚಿಸು ತ್ತಿತ್ತೆಂಬುದನ್ನೂ ಪಕೀರ ಬಂದದ್ದೇ ಸೂಚಿಸಿತು. ಹೊನ್ನಕಲಶದಂತೆ ಬೆಳಗಿದ ತಾಂಬ್ರದ ಚೊಂಬಿನಲ್ಲಿ ತಿಳಿಯಾದ ತಣ್ಣನೆಯ ನೀರು, ಬೆಳ್ಳಿಯಂತೆ ಬೆಳಗಿದ ಉದ್ದವಾದ ಪಾವಿನ ಕಂಚಿನ ಲೋಟದೊಡನೆ ಬಂದ ಆ ಪಕೀರಸ್ವಾಮಿ.

ಸವಿಯಲೊಂದು ಸೇರು ಪಕೋಡ
ಭುವಿಯಲುಂಟೆ ಇದಕು ಸುಖ
ಬದಿಯಲೊಂದು ಲೋಟ ಜಲ
ಕದಿಯಲೆಲ್ಲ ಲೋಕವನು
ಬೇಡೆಂದವರಾರು ?

—ದೇರಣ್ಣ ಪ್ರಭು.

ಎಂದು ಬರೆದ ನಾಲ್ಕುಸಾಲಿನ ಪದ್ಯದ ಚೀಟಿಯನ್ನು ಎದುರಿಗೆ ಹಿಡಿದರು.

"ಇದೇನು ದಫೆದಾರ್ರೇ ಕವಿತೆ ಬೇರೆ ಮಾಡ್ತಿರೇನು ?"

"ಇಲ್ಲ ....ಹ.... .. ಇದೂ ಸಾವಂತ್ರಿ ಕಟ್ಟಿದ ಕವಿತೆ."

"ಅರೆ! ಮತ್ತೆ ಕೆಳಗೆ ನಿಮ್ಮ ಹೆಸರಿದೆ."

"ಹೌದೆ!....ಏನಂತ ಇದೆ ಸರಿಯಾಗಿ ಓದಿನೋಡಿ . ...."

"ದೇರಣ್ಣ ಪ್ರಭು ...ಅಂತಿದೆಯಲ್ಲಾ."

"ಮತ್ತೇ.... . ಹಾಗನ್ನಿ ದೇರಣ್ಣ ಪ್ರಭು....ಅಂದ್ರೆ ನಾನೇ (.. ದೇರಣ್ಣನವರ ಪ್ರಭು ...ಹಿಹಿ....ಅರ್ಥವಾಯ್ತೆ."

—ಅವರ ಪ್ರಭು ಸಾವಂತ್ರಮ್ಮನವರು ಅನ್ನುವುದನ್ನು ಮುಗುಂ ಆಗಿ ತಿಳಿಸಿ, ಹಾಗೆ ಆ ಮಹಾತಾಯಿ ತಮಗೆ ಒಡತಿಯಾಗಿರುವುದೇ ತಮಗೆ ಪ್ರಿಯ ಎನ್ನುವುದನ್ನು ಇಡೀ ಎರಡು ಪಕೋಡವನ್ನು ಒಟ್ಟಿಗೇ ಬಾಯಿಗೆಸೆದು ಆನಂದವಾಗಿ ಅಗಿದು ಅದರ ಮಧುರ ಕಂಪನ್ನು ಅನುಭವಿಸುತ್ತಾ ಆಕಾಶ ನೋಡಿದರು.

"ಹಹ್ಹ ಹಹ್ಹ....ಅರ್ಥವಾಯ್ತು....ಈ ಕವಿತೆ ಯಾವಾಗ ನಿಮ್ಮ ಪ್ರಭುಗಳು ರಚಿಸಿದ್ದು ?...."

"ಇದೇ ದೀಪಾವಳಿಯಂದು—ಅಂದರೆ ನಾನು ಮೊದಲಬಾರಿ ಅಳಿಯತನಕ್ಕೆ ದೀಪಾವಳಿಗೆ ಹೋದಾಗ ...ಬಾಗೂರಲ್ಲಿ"

"ಅಂದಹಾಗೇ........ನಿಮ್ಮದು ಬಾಗೂರು ಆದದ್ದಕ್ಕೆ ಸಾರ್ಥಕವಾಯ್ತು ದಫೆದಾರ್ರೆ"

"ಅಂದರೆ!...."

"ಬಾಗಿ ನಡೆವ ಊರವರು ಬಾಗೂರವರು....ಹಹ್ಹ........ಹೆಂಡರಿಗೆ ಬಾಗಿ ನಡೆವವರೂರು...."

"ಆ ಊರವರೆಲ್ಲಾ ಹಾಗೆಯೇಂತ ತಿಳಿದೀರ....ಅದಿರಲಿ ಮೊದಲ ದೀಪಾವಳಿ ಅಂದ್ಮೆ ಒಂದು ಸಂಗತಿ ನೆನಪಿಗೆ ಬರುತ್ತೆ........ಆಗ ನಾವುಗಳು ಈಗಿನಹಾಗೆ ಕ್ರಿಸ್ ಫಠಾಕಿ ಖಾರವಿಲ್ಲದ ಚಿನಕುರುಳಿ ಹೊಡೀತಿರಲಿಲ್ಲ. ನಮ್ಮ ದಿವಾಳಿ ಎಲ್ಲಾ ಜೀವಂತ ಗುಂಡುಗಳನ್ನು ಹೊಡೆಯುವುದರಲ್ಲೇ ಆಗ್ತಿತ್ತು...."

"ಅಂದರೆ ರಾಗಿ ಗುಂಡೂಂತ ಅರ್ಥವೇ...."

“ಛೆ ಛೆ—ಬಂದೂಕೇ ನಮಗೆ ಜೀರಿಗೆ ಪಟಾಕಿ—ಡಬ್ಬಲ್ ಬ್ಯಾರಲ್‌ಗನ್ನೇ ನಮಗೆ ಆನೆಪಟಾಕಿ—ಫಿರಂಗಿಯೇ ಆಟಂಬಾಂಬು....”

“ಫಿರಂಗೀ ೯....”

“ಹುಂ ಫರಂಗಿಯವನೊಬ್ಬ ಕೊಟ್ಟ ಹೆಣ್ಣು ಬಂದೂಕವೇ ಪಿರಂಗಿ”

“ಏನು ದಫೆದಾರ್‍ರೆ ನೀವು ಹೇಳ್ತಿರೋದು ಹೆಣ್ಣು ಬಂದೂಕು....ಗಂಡು ಬಂದೂಕೂಂತ ಇರುತ್ತವೆಯೇ....”

“ಇಲ್ದೇ ಏನು....ಸಾವಂತ್ರಿ ನನ್ನ ಷಿಕಾರಿಮಾಡಿದ್ದು ಹೆಣ್ಣು ಬಂದೂಕದಿಂದಲೇ ....ಹಿಂದೆ ಕ್ಯಾಪ್ಟನ್ ಪಿಗ್ ಅನ್ನೋ ಅಂಗ್ರೇಜಿಯವನ ಕಥೆ ಹೇಳಿರಲಿಲ್ಲವೇ”

“ಹೌದು ಅವನು ಕೊಟ್ಟಿದ್ದೊ ಈ ಬಂದೂಕಿ....”

“ಕರೆಕ್ಟ್ ಹೆಣ್ಣು ಬಂದೂಕಿಗೆ ‘ಬಂದೂಕಿ’ ಎಂದರೇ ಚೆನ್ನ....ಹೆಣ್ಣು ಕಳೆ ಇರತ್ತೆ ಅದಕ್ಕೆ....ನಾನೇನು ಹೇಳ್ತಿದ್ದೆ ?”

“ಆದೇ ಮೊದಲ ದೀಪಾವಳಿ ವಿಚಾರ”

“ಹುಂ ಕೇಳಿ—ಹಳೇಕಾಲ ಒಳ್ಳೇ ಹರೆಯ ನನಗೆ—ಆಗತಾನೆ ಎರಡು ಹುಲಿ ಹೊಡೆದ್ದು ಬಂದು ದಣಿದು ಮಲಗಿದ್ದೆ. ನನ್ನ ಭಾವಮೈದ ಬಂದ....”

“ಭಾವಮೈದಾಂದ್ರೇ....”

“ಹೆಂಡ್ತಿ ತಮ್ಮ.. ಅವನ್ನ ನೋಡಿದರೆ ಸಾವಂತ್ರಿ ತಮ್ಮಾಂತ ಆಣೆಮಾಡಿ ಹೇಳಬೇಕು. ಇವಳು ಪಂಕಜಪುಷ್ಪವಾದರೆ ಅವನು ಪಾಪಾಸುಕಳ್ಳಿ. ಆವಳು ಪಾರಿಜಾತವಾದರೆ ಇವನು ಪರಂಗಿಕಾಯಿ ಅವಳು ತೊಂಡೆಹಣ್ಣು ಇವನು ತೊಳೆದ ಕಂಡ ...”

“ಸರಿ ಅರ್ಥವಾಯ್ತು, ಸಾವಂತ್ರಮ್ಮನವರು ಹುಣ್ಣಿಮೆಯಾದರೆ ಇವನು ಅಮಾವಾಸ್ಯೆ....”

“ಕರೆಕ್ಟ್ ...ಸಾವಂತ್ರಿ ಎಲ್ಲಾ ಅಪರಮ್ಮನಹಾಗೆ ಈ ಭಡವ ಭಾವಮೈದ ಎಲ್ಲಾ ಅಪರಪ್ಪನ ಹಾಗೆ ಕೇಳಿ ಮುಂದೆ ಅಳಿಯತನಕ್ಕೆ ಕರೆಯೋಕೆ ಜೋಟುದ್ದ ಹುಡುಗನ್ನ ಕಳಿಸೋದೆ ?....ನಮ್ಮಪ್ಪ ರೇಗಿ ಆ ಹುಡುಗನ್ನ ಹೊಡೆದು ಅಟ್ಟಿದರು....”

“ಅಯ್ಯೋ ಪಾಪ”

"ನಮ್ಮಪ್ಪನಿಗೆ ಬಹಳ ಮರ್ಯಾದೆ ಬೇಕು—ಆ ಹುಡುಗನ್ನ ಗುಂಡಿಂದಲೇ ಹೊಡೆಯಬೇಕೆಂದಿದ್ದರು ಆದರೆ ಸೊಸೆಯ ತಮ್ಮನೆಂದು ಬಂದೂಕನ್ನು ತಿರುವು ಮುರುವುಮಾಡಿ ಹೊಡೆದಿದ್ದರು....ಆ ಮೇಲೆ ವಾಲಗ ಪ್ರಾರಂಭವಾಯ್ತು."

"ಆ ಪಾಟ ಹೊಡೆದರೆ ಅಳದೆ ಉಂಟೆ ?"

"ವಾಲಗವೆಂದರೆ ಅದಲ್ಲ—ನಾಗಸ್ವರ—ನನ್ನ—ನನ್ನ ತಂದೆ ಕೋಪ ಇಳಿಸಲು ಮಾವನವರು ಶೃಂಗಾರಮಾಡಿದ ಕುದುರೆಯೊಡನೆ ಮುತ್ತೈದೆಯರು ಆರತಿ ಹಿಡಿದಿದ್ದಾರೆ....ಮಾವಯ್ಯ ಮರ್ಯಾದೆ ಮಾಡುತ್ತಿದಾರೆ ಶೃಂಗಾರವಾಗಿ ಅಳಿಯ ದೇವರೇ ಎಂದು ಅತ್ತೆಮ್ಮ ಉಪಚರಿಸುತ್ತಿರೆ, ಠೀವಿಯಿಂದ ಅಳಿಯತನಕ್ಕೆ ದೀವಳಿಗೆ ಗಂಡು ದೇರಣ್ಣೋರು ಹೊರಟರು."

"ಸೊಗಸಾದ ದೃಶ್ಯವಿರಬೇಕು.. ....ಅಂತೂ ನಿಮ್ಮ ತಂದೆ ಹಟವೇ ಗೆದ್ದಿತೂನ್ನಿ...."

"ಅಷ್ಟಲ್ಲದೇ....ಕುದುರೆ ಮೇಲೆ ಕೂತ್ಕೊಳ್ಳೋಕೆ ಕಾಲು ಹಾಕಿದೆ, ಹಾಗೇ ನಡೆದೆ—ನಾನು ಅಲ್ಲೇ ಇದ್ದೆ ಕುದುರೆ ಮುಂದೆ ಹೋಗಿಬಿಟ್ಟಿತ್ತು "

"ಅರೆ! ಮೇಲೆ ಕೂತಿರಲಿಲ್ವೆ ನೀವೂ"

"ಅದು ಕತ್ತೆ ಸೈಜಿನ ಕುದುರೆ—ಕೂತಾಗ ನನ್ನ ಕಾಲು ನೆಲ ತಗುಲಿ ಕಾಲು ಸಂದಿನಿಂದ ಆ ಕುದುರೆ ತಪ್ಪಿಸಿಕೊಂಡು ಹೋಗಿತ್ತು. ಮಾವನವರು ಹಿಡಿದು ತಂದು ಹಿಂದೆಮುಂದೆ ಆಳುಗಳನ್ನು ಇಡಿಸಿ ಮೆರವಣಿಗೆ ಸಾಗಿಸಿದರು. ಆದರೂ ನಾನು ನಡೆಯಲೇಬೇಕಾಯ್ತು—ಆ ಕತ್ತೆ ಕಾಲು ನಡುವೆ ನಡೆದು ಬರುತ್ತಿತ್ತು.."

"ಹಹ್ಹ ಹಹ್ಹ....ಚೆನ್ನಾಗಿದೆ."

"ಆ ಮೇಲೆ ಕೇಳಿ—ಮದುವೆ ಮೆರವಣಿಗೆಗಿಂತ ದೀಪಾವಳಿ ಮೆರವಣಿಗೆಯೇ ಜೋರು ಎಂದು ಇಡೀ ಬಾಗೂರೇ ಬೆರಗುಗೊಂಡಿತು.. ಅಳಿಯ ಮನೆ ಸೇರಿದ... ಸೊಗಸಾಗಿ ಅದ್ದೂರಿಯ ಉಪಚಾರ....ವಣಗಟ್ಟಲೆ ಪಕೋಡ ತಿನ್ನಿಸಿದರು"—ಎಂದು ಮತ್ತೆರಡು ಪಕೋಡ ತಿಂದರು.

"ಆಗಲೇಂತ ಕಾಣತ್ತೆ ಸಾವಂತ್ರನ್ಮುನವರು ಈ ಕವಿತೆ ಬರೆದಿದ್ದು.."

"ಹೌದು ಕೇಳಿ.. ಮಾವನ ಮನೇಲಿ ನನಗಾಗಿ ಒಂದು ರೂಮು ಸ್ಪೆಶಲ್ ಈಚಲ ಚಾಪೆ ಹಾಸಿದ್ದರು. ಸಾವಂತ್ರಿ ಆಹಹ... ಹರೇದ ಹುಡುಗಿ ಆಗ ನೋಡಬೇಕಿತ್ತರಿ ಅವಳ ಸೌಂದರ್ಯ....ಬ್ರಹ್ಮ ಇವಳನ್ನ—ಮತ್ತೆ ಆ ರತೀನ್ನ ಇಬ್ಬರನ್ನೇ

ಇಷ್ಟು ಚಲುವಾಗಿ ಮಾಡಿದ್ದಂತೆ....ನಾನು—ಅವಳು ಆ ರೂಮು....ರಸಿಕಮೂರ್ತಿ ನಾನು ಕೇಳ್ತೀರಾ ...ಆದರೇ ...ಇನ್ನೂ ನಿಷೇಕವಾಗಿರಲಿಲ್ಲ. ಹತ್ತಿರ ಹೋಗೋ ಹಾಗಿಲ್ಲ...."

"ಅಯ್ಯೋ ಪಾಪ....ಆಮೇಲೆ"

"ನರಕಚತುರ್ದಶಿ—ನನಗೆ ನರಕಯಾತನೆ—ಎಷ್ಟು ಹತ್ತಿರ ಆದರೆ ಎಷ್ಟು ದೂರ! ಎಷ್ಟು ಯಾತನೆ! ಆದರೆ ಎಂತಹ ಮಧುರಯಾತನೆ!"

"ಅರೇ ಮುಂದೆ ಹೇಳೀಂದ್ರೆ .. "

"ಹೇಳ್ತೀನಿ ತಡೀರಿ....ಸೊಗಸಾದ ಅಭ್ಯಂಜನ....ಫಲಹಾರ—ಊದುಬತ್ತಿ ವಾಸನೆ....ರಾತ್ರಿ ಆಗ್ತಾಬಂತು ಸಂಜೆ ಕಾಮನಬಿಲ್ಲು ಕಂಡಂತೆ ಕಂಡ ಸಾವಂತ್ರಿ ಮುಖ ಬಣ್ಣದ ಮತಾಪಿನಲ್ಲಿ ಬಹಳ ರಂಗುರಂಗಾಗಿ ಕಂಡಿತು. ಅವಳ ಮುಖ ವನ್ನೇ ನೋಡುತ್ತಾ ರೂಮಿಗೆ ಹೋದೆ—ಈಚಲ ಚಾಪೆ ಬದಲು ಕಂಬಳಿ—ಅಕ್ಕ ಪಕ್ಕದಲ್ಲಿ ಎರಡು ಸೊಗಸಾದ ಹಾಸಿಗೆ—ದಿಂಬು ಊದುಬತ್ತಿ ...ಆಹಹ....ಎಂದು ಹಿಗ್ಗಿದೆ....ಮತ್ತಿನ್ಯಾರಿಗೆ ಎರಡು ಹಾಸಿಗೇ ಎಂದೆನ್ನುತ್ತಾ ಒಳಕ್ಕೆ ಹೋದೆ. ಕಾದಿದ್ದೆ ಎದೆ ಬಡಿಯುತ್ತಿತ್ತು....ಭಾವಮೈದ ಬಂದ....ಮನಸ್ಸು ತಡೆಯಲಾರದೇ ಕೇಳಿದೆ.... ಅವನನ್ನು...." ವಿರುಪಾಕ್ಷಾ....ಯಾಕೆ ಬಂದೆ?" ಎಂದು....

"ಮಲಗುಕ್ಕೇ ಭಾವಾ" ಎಂದು ಒಂದರ ಮೇಲೆ ಬಿದ್ದುಕೊಂಡ ಆ ಭಡವ...."

—ಬಿದ್ದು ಬಿದ್ದು ನಕ್ಕೆ. ಹೊಟ್ಟೆ ಹುಣ್ಣಾಗಿ ಹೋಯಿತು. ನೀರು ಕುಡಿದೆ ನಗು ನಿಲ್ಲಲಿಲ್ಲ. ಅದೇ ದಫೇದಾರ್ರು ಅಂದು ಬಿದ್ದ ಬೇಸ್ತನ್ನು ಇದೇ ಇಂದು ಅನುಭವಿಸುವವರಂತೆ ಕಣ್ಣಲ್ಲಿ ನೀರು ತಂದುಕೊಂಡು ಕಡೇ ಪಕೋಡ ತಿಂದರು.

"ದಫೇದಾರ್ರೇ ಹೋಗ್ಲಿ ಬಿಡಿ ...ದೀಪಾವಳಿ....ಈಗಲೇ ಮನೆಗೆ ಹೋಗಿ.... ಮತಾಪಿನ ಬೆಳಕಲ್ಲಿ ನಿಮ್ಮ ಸಾವಂತ್ರಿನ್ನ ನೋಡಿ....ಹಳೇ ನೆನಪು ಮರುಕಳಿಸಲಿ ..."

—ಎಂದು ಹುರಿದುಂಬಿಸಿದೆ. ಆದರೆ ಅತ್ತರು....ಅತ್ತ ಅಂದರು.

—ದಾಶರಥಿ ದೀಕ್ಷಿತ್.

—— o ——

ನನ್ನ ಶಾಲೆ

ಬಾಗಿಲೊಳು ಕೈ ಮುಗಿದು ಹೊರಬಂದೆ, ನಾ, ಮೊನ್ನೆ
ಶಿಲೆಯಲ್ಲ ಈ ಶಾಲೆ; ಬಾಳ ನೆಲೆಯು!
ತೊದಲುವನ ತೆವಳುವನ ಹತ್ತು ವರ್ಷದ ಹಿಂದೆ
ನನ್ನನೆಳೆದಿದರೊಳಗೆ ಕೂರಿಸಿದನಣ್ಣ!
ನಾಲಗೆಗೆ ಮಾತನೂ ನಯನಗಳಿಗೊಲವನೂ
ಮೆದುಳಿಂಗೆ ಹರಿತವನು ಕೊಟ್ಟು, ಎನ್ನ
ನಾಗರಿಕ ಪಥದಲ್ಲಿ ನಡೆಸಲೆಳೆಸಿತು, ಶಾಲೆ
ಅನುದಿನದ ಹಿತವಚನದಾದೇಶದಿಂದ!
ಆಟ ಊಟಗಳೆಂದು ಬಳಿಗೆಳೆದು ಪಾಠಗಳ
ಮಾಟದಿಂ ನಾಟಿದರು ಎನ್ನ ಮನದಿ
ಮಾಸ್ತರುಗಳೆಲ್ಲರೂ ದುಸ್ತರದ ನೀತಿಗಳ
ನಡೆದು ತೋರಿದರೆನಗೆ ಬೆಳಕನೀಡೆ.
ಕೆ.ವಿ.ಕೆ., ಜೀ.ವಿ.ಸಿ., ಮಾಸ್ತರುಗಳಾ ಹೆಸರು
ಹಸುರಾಗಿ ಉಳಿಯುವುದು ಉಸಿರಿರುವತನಕ
ಕಂಡಕಂಡಾಗೆಲ್ಲ, ಪುಂಡನಾಗದಿರೆಂದು
ಎಚ್ಚರಿಕೆ, ಎಚ್ಚರಿಕೆ, ಎನುತಿದ್ದರು.
ಚೆಂಡಾಟ ಬಯಲಲ್ಲಿ, ಭಂಡಾಟ ತೆಗಿದಾಗ
ಅಂಪೈರು ಕೆಂಪಣ್ಣ ರೇಗಿ ಶಪಿಸಿ
ಪಾಸು ಮಾಡೋ ಬೇಗ, ಫೌಲು ಆಡಲು ಬೇಡ,
ಟೀಮಾಗಿ ದುಡಿಯಿರೊ, ಸ್ವಾರ್ಥ ತಪ್ಪು!—
ಎಂದೆನ್ನ ಮೆದುಳಲ್ಲಿ ಸುಖಜೀವನದಾ ಗುಟ್ಟ
ನೆಟ್ಟು ಬೆಳೆಸಿದವರು, ನನ್ನ ಗುರುವು
ನನ್ನ ಸಹಪಾಠಿಗಳು ಮೂದಲಿಸಿ ನಕ್ಕೆನ್ನ
ಕೊಂಕುಗಳ ನೇರ್ಪಡಿಸಿ ನೆರವಾದರು.
ಅಡ್ಡ ಹೆಸರನಿರಿಸಿ ಶಾಲೆಗೊಡೆಯ ಮೇಲೆ
ನಡತೆಯನು ಸರಿಪಡಿಸೆ, ಬರೆದಿಟ್ಟರು.
ಇನ್ನು, ನನ್ನೀಬದುಕು ಎಂತಿರಲಿ, ಹೇಗಿರಲಿ,
(ಮಂತ್ರಿ ಪದವಿಯೆ ಎನಗೆ ಕಾದಿದೆಯೋ?! ಏನೊ?)
ನನ್ನ ಈ ಶಾಲೆಯನು ಮರೆಯೆ, ಮರೆಯೆನು ನಾನು,
ಸೊನ್ನೆ ಹಿಂದೆನಗಿಲ್ಲೆ, ಅಂಕಿ ಬಂತು. —ನಾ.ಕ.


ಶರ ವೇಗದಲಿ ಬರುತ್ತದೆ!
ವಿಜಯ ರವರ
ಮಾಯಾಬಜಾರ್
(ಕನ್ನಡ)
ನಿರ್ದೇಶನ: ಕೆ. ವಿ. ರೆಡ್ಡಿ
ಸ್ಟುಡಿಯೋ: ವಾಹಿನಿ
ನಿರ್ಮಾಪಕರು: ನಾಗಿರೆಡ್ಡಿ & ಚಕ್ರಪಾಣಿ
ದಿ ವಿಜಯ ಟಾಕೀ ಡಿಸ್ಟ್ರಿಬ್ಯೂಟರ್ಸ್ ಬೆಂಗಳೂರು
ಹಂಚಿಕೆಗಾರರು
ಶ್ರೀನಿವಾಸ ಪಿಕ್ಚರ್ಸ್ ಗದಗ

Printed by B. S. Iyengar, Bangalore City.

Publisher—B. N. Gupta. Editor—M. Sivaram.